ಶ್ರೀ ಗುರುಭ್ಯೋನಮಃ.



ವೇದಾಂತರಹಸ್ಯವಾದ

ಪಂಚೀಕರಣ ಗ್ರಂಥವು.

ಶ್ಲೋ॥ ಬ್ರಹ್ಮಾನಂದಂಪರಮಸುಖದಂಕೇವಲಂಜ್ಞಾನಮೂರ್ತಿಂ । ದ್ವಂ
ದ್ವಾತೀತಂಗಗನಶದೃಶಂತತ್ವಮಸ್ಯಾದಿಲಕ್ಷ್ಯಂ ॥ ಏಕಂನಿತ್ಯಂವಿಮಲಮ
ಚಲಂಸರ್ವದಾಸಾಕ್ಷಿಭೂತಂ । ಭಾವಾತೀತಂತ್ರಿಗುಣರಹಿತಂಸದ್ಗುರುಂ
ತನ್ನಮಾಮಿ ॥೧॥ ಆನಂದಮಾನಂದಕರಪ್ರಸನ್ನಂ । ಜ್ಞಾನಪ್ರಸನ್ನಂನಿಜ
ಬೋಧಯುಕ್ತಂ । ಯೋಗೀಂದ್ರವೇದ್ಯಂಭವರೋಗವೈದ್ಯಂ । ಶ್ರೀಮ
ದ್ಗುರುನಿತ್ಯಮಹಂನಮಾಮಿ ॥ ... ॥೨॥

ಗುರುಗಳಿಗೆ ವಂದನೆಯಂಮಾಡಿ, ಸಕಲಕಾರ್ಯ ನಿರ್ವಿಘ್ನದಾಯಕನಾದ ಶ್ರೀಸಿದ್ಧಿವಿನಾಯಕನಡಿಗೆರಗಿ ಶಾರದೆಯಂ ಬಲಗೊಂಡು ಗುರುಚರಣರಜಃಪ್ರಸಾದ ಪ್ರಭಾವದಿಂ ಮುಮುಕ್ಷುಗಳ ಸಂಶಯ ನಿವಾರಕವಾಗಿ ಸಂಸಾರ ತಾರಣೋಪಾಯವಾದ ಜೀವ ಭ್ರಾಂತಿಯಳಿದು ತಾನೇಬ್ರಹ್ಮನೆಂ

ಬ ಜ್ಞಾನವು ದೃಢವಾಗುವಂತೆ ಲೋಕೋಪಕಾರವಾಗಿ ಜೇಡರಹಳ್ಳಿ ಸೂರಪ್ಪನವರಿಂದ ಕನ್ನಡ ಭಾಷೆಯಾಗಿ ರಚಿಸಲ್ಪಟ್ಟ ಪಂಚೀಕರಣ ವಿಭಾಗವು ಪ್ರಥಮಾಧ್ಯಾಯದಲ್ಲಿ ಅಧಿಕಾರ ನಿರ್ಣಯವು, ಯರಡನೇ ಪಂಚವಿಂಶತಿ ತತ್ವ ವಿಭಾಗವು, ಮೂರನೇ ಅಷ್ಟಾಂಗಯೋಗ ನಿರ್ಣಯಂಗಳು, ನಾಲ್ಕನೇ ಸಕಲ ಸಾಧನ ನಿರೂಪಣಸ್ನಾಮವು, ಐವನೇ ಸಪ್ತ ಭೂಮಿಕೆಗಳಭ್ಯಾಸವು, ಆರನೇ ಅಧ್ಯಾಯದೋಳ್ ರಾಜಯೋಗ ಕಾಲಜ್ಞಾನಗಳೆಂಬ ಷಡ್ರಸೋಪೇತನಾದ ಷಡಂಗವಾದ ಷಡ್ವೈರಿಗಳಂ ನಿಗ್ರಹಿಂಸಲ್ಪಡುವದಾಗಿಯೂ, ಈ ಪಂಚೀಕರಣ ತತ್ವವು ಸುಲಭೋಪಾಯವಾದ ಪರಬ್ರಹ್ಮ ಸ್ವರೂಪವ ತಿಳಿಯುವವಕ್ಕೆ ಅನುಗುಣ್ಯವಾದದ್ದು. ಇದಕ್ಕೆ ಅಧಿಕಾರಿ ಯಾರೆಂದರೆ,—ಸಾಧನ ಚತುಷ್ಟಯ ಸಂಪನ್ನನೆ ಅಧಿಕಾರಿಯು, ಯಲ್ಲರೂ ಅಧಿಕಾರಿಗಳಾಗ ಬಾರದೆಂದರೆ. ಹರಿವ ನದಿಗಳು ಮರಳಿ ತಮ್ಮ ಜನ್ಮಭೂಮಿಯು ಹ್ಯಾಗೆ ಕಾಣಲಾರವೋ ಹಾಗೆ ಸಂಸಾರ ಪ್ರಭಾವದಲ್ಲಿ ಮಗ್ನರಾಗಿ ರಾಗದ್ವೇಷವಶರಾಗಿ ದೇಹಾಭಿಮಾನಿಗಳಾಗಿ ಪುತ್ರ ಮಿತ್ರ ಕಳತ್ರ ಬಂಧುಗಳೆಂಬ ಮಾಯವ ಬಲೆಗೆ ತಗಲಿ ಕೊಂಡಿಹ ಪ್ರಾಣಿಗಳಿಗೆ ಸಧಾ ಬೋಧಿಸಿದರೂ ಬ್ರಹ್ಮ ಜ್ಞಾನದಲ್ಲಿ ಮನನಿಲ್ಲಲಾರದಾಗಿಯೂ, ಶೂದ್ರನಿಗೆ ಉಪನಯನ ಸಂಸ್ಕಾರದಿಂದ ಹ್ಯಾಗೆಬ್ರಾಹ್ಮಣನಾಗನೋ, ಬ್ರಾಹ್ಮಣನೇ ಹ್ಯಾಗೆ ಅಧಿಕಾರಿಯೋ, ಹಾಗೆಯೇ ಸಾಧನ ಚತುಷ್ಟಯ ಸಂಪನ್ನನೆ ಅಧಿಕಾರಿಯು. ಸಾಧನ ಚತುಷ್ಟಯ ಸಂಪತ್ತುಯೇನಂದರೆ,-ಆತ್ಮಾನಾತ್ಮ ವಿವೇಕವು, ಇಹ ಮುತ್ರಾರ್ಥ ಫಲ ಭೋಗ ವಿರಾಗವು, ಸಮಾಧಿ ಷಟ್ಸಂಪತ್ತು, ಮುಮುಕ್ಷುತ್ವಗಳೆಂದು ಈ ನಾಲ್ಕು ಪ್ರಕಾರವು.. ಇದಕ್ಕೆ ವಿವರವೇನಂದರೆ,-ಆತ್ಮಾನಾತ್ಮ ವಿವೇಕವೇನಂದರೆ, ದೇಹೇಂದ್ರಿಯ ಮನಃ ಪ್ರಾಣೇಂದ್ರಿಯಂಗಳು ಮಾಯ ಕಾರ್ಯಗಳಾಗಿ ಜಡವಾಗಿ ಅನಿತ್ಯಗಳು. ಇವಕ್ಕೆಲ್ಲ ವಿಲಕ್ಷಣವಾಗಿ ಸಾಕ್ಷಿ ಯಾದಾತ್ಮನೊಬ್ಬನೇ ನಿತ್ಯನೆಂದು ಶ್ರುತಿಯಿಂದಲೂ, ಗುರುವಿನಿಂದಲೂ, ಮತ್ತು ಸ್ವಾನುಭವದಿಂದಲೂ, ತಿಳದು ನಿಶ್ಚೈಸುವದೇ ಆತ್ಮನಾತ್ಮ ವಿವೇಕವೆಂಬ ಪ್ರಥಮ ಸಾಧನವು. ಇಹಮುತ್ರಾರ್ಥ ಫಲ ಭೋಗ ವಿರಾಗ ಲಕ್ಷಣಗಳೇನಂದರೆ, ಇಹ ಈ ಮನುಷ್ಯಲೋಕದಲ್ಲಿ ಸ್ರಕ್ಚಂದನ ವನಿತಾದಿಗಳಲ್ಲಿಯೂ, ಪರಲೋಕದಲ್ಲಿಯೂ, ಅಮೃತಪಾನ ಮೊದಲಾದ ದೇವ ಭೋಗಂಗಳಲ್ಲಿಯೂ

ಆಶೆಯುಂ ಬಿಡುವದೇ ಇಹ ಮುತ್ರಾರ್ಥ ಫಲ ಭೋಗ ವಿರಾಗವೆಂಬ ಯ
ರಡನೆಯ ಸಾಧನವು, ಈ ವೈರಾಗ್ಯವೇ ಜ್ಞಾನಕ್ಕೆ ಮುಖ್ಯ ಸಾಧನವಾದ್ದ
ರಿಂದ ಸರ್ವ ಪ್ರಯತ್ನದಿಂದಲೇ ಸಂಪಾದಿಸಬೇಕು,ಪ್ರಯತ್ನವೆಂದರೇ ಯೇ
ನು, ಈ ಸಮಸ್ತ ವಿಷಯುಂಗಳು ಮಾಯಾಕಾರ್ಯವಾಗಿಯೂ, ಅನಿತ್ಯವಾ
ಗಿಯೂ, ದುಃಖಮಯವಾಗಿಯೂ, ಇರುವದೆಂದು ವಿಚಾರಿಸಿ ಒಂದೊಂ
ದಾಗಿ ಮೆಲ್ಲಮೆಲ್ಲನೆ ಬಿಡುವದೀಗ ಉಪಾಯವು. ಸಮಾಧಿ ಷಟ್ಸಂಪತ್ತಿ
ಯೇನಂದರೆ,-ಶಮೆಯಂತಲೂ, ದಮೆಯಂತಲೂ, ತಿತಿಕ್ಷೆ, ಉಪರತಿ, ಸ
ಮಾಧಾನ, ಶ್ರದ್ಧೆಗಳೆಂದು ಆರು ಕೂಡಿ ಮಂದು ಸಾಧನವೆನಿಸುವದು.

ಇವಕ್ಕೆ ವಿವರ,ಶಮವೆಂದರೆ, ಅಂತಃಕರಣ ನಿಗ್ರಹವು, ದಮೆಯಂದರೆ
ಬಾಹ್ಯೇಂದ್ರಿಯ ನಿಗ್ರಹವು, ತಿತೀಕ್ಷೆ ಯಂದರೆ, ಸಂತೋಷ ಸುಖದುಃಖ
ಲಾಭಾಲಾಭ ಮಾನಾವಮಾನ ಜಯಾಪಜಯಗಳೆಂದು ಈ ಬಗೆ ದ್ವಂದ್ವಗ
ಳ ಸಹಿಸುವದು ಉಪರತಿಯುಂದರೆ, ವಿಷಯದಲ್ಲಿದ್ದ ಆಸಕ್ತಿಯ ಬಿಟ್ಟು ಆ
ತ್ಮನಲ್ಲಿ ಆಸಕ್ತಿಯ ಮಾಳ್ಪುವದು,ಸಮಾಧಾನವೆಂದರೆ, ಹಲವುಕಡೆಗೆ ಹರಿ
ದು ಹೋಗುವ ಚಿತ್ತವೃತ್ತಿಯ ಆತ್ಮನಲ್ಲಿಯೇ ಯೇಕಾಗ್ರವಾಗಿ ನಿಲ್ಲಿಸು
ವದು, ಶ್ರದ್ಧೆಯಂದರೆ, ಗುರುವಿನಲ್ಲಿಯೂ, ವೇದಶಾಸ್ತ್ರಂಗಳಲ್ಲಿಯೂ, ವಿ
ಶ್ವಾಸಮಾಳ್ಪುವದು, ಇವು ಆರು ಕೂಡಿ ಶಮಾದಿ ಷಟ್ಸಂಪತ್ತಿಯೆಂದು
ಮೂರನೆಯಸಾಧನವು ಮುಮುಕ್ಷುವೆಂದರೆ,ತಾಪತ್ರಯವೆಂಬ ಅಗ್ನಿಯಲ್ಲಿ
ತಪ್ತನಾಗಿ ಸಂಸಾರ ದುಃಖದಲ್ಲಿ ನೊಂದು ಈ ದುಃಖ ಪರಿಹಾರವಾಗಿ ಶಾಂ
ತಿ ಸುಖ ಯೆಂದಿಗಾದೀತೋ ಯಂದು ನಿರಂತರ ಮೋಕ್ಷಾಪೇಕ್ಷೆಯಾಗಿಪ್ಪ
ದೇ ಮುಮುಕ್ಷುತ್ವವೆಂಬ ನಾಲ್ಕನೆಯ ಸಾಧನವು, ತಾಪತ್ರಯವೆನ್ನರೆ ಆ
ಧ್ಯಾತ್ಮಿಕ, ಆದಿಭೌತಿಕಆದಿದೈವಿಕವೆಂಬ ಮೂರುಬಗೆಯಾಗಿರ್ಪುದು, ಅ
ದು ತನ್ನ ದೇಹದಿಂದುಂಟಾದವಾಧಿ ಮೊದಲಾದ್ದು ಅನುಭವಿಸುವದು-ಸ
ರ್ಪ ವೃಶ್ಚಿಕ ಮೊದಲಾದ ಅನ್ಯರಿಂದುಂಟಾದದ್ದು ದೇವರಿಂದುಂಟಾದ ಭೀ
ತಿ ಮೊದಲಾದದ್ದು, ಇವು ಮೂರು ಅನುಭವಿಸೋಣವೇ ತಾಪತ್ರಯಗ
ಳು,ಈನಾಲ್ಕು ಸಾಧನಗಳನ್ನು ಸಾಧಿಸಿಕೊಂಡು ಶಾಂತನಾಗಿದಾಂತನಾಗಿ
ಜಿತೇಂದ್ರಿಯನಾಗಿ ನಿರ್ಮಲಾಂತಃಕರಣನಾಗಿಗುರುವಿನ ಸಮೀಪಕ್ಕೆ ಸೇ
ರಬೇಕು, ಇಲ್ಲದಿದ್ದರೆಗುರುವಿನಿಂದ ಶಿಕ್ಷಿತನಾಗಿ ಈಸಾಧನಗಳ ಅಭ್ಯಾಪ
ಡಿಸಬೇಕು ಆವತರದಲ್ಲಿಯೂ ಈ ಸಾಧನಗಳು ಇರಬೇಕು, ಇಲ್ಲದವನಿಗೆ

ಜ್ಞಾನ ಸಾಧ್ಯವಾಗಲರಿಯದು ಗುರುವಿನ ಸ್ವರೂಪವೇನೆಂದರೆ-ಸರ್ವಜ್ಞನಾಗಿ ಸರ್ವಜೀವದಯಾಪರನಾಗಿ ಸರ್ವಸಂಶಯ ಪರಿಚ್ಛೇದಕನಾಗಿ ಖ್ಯಾತಿ ಲಾಭಾಪೇಕ್ಷರಹಿತನಾಗಿ ಸಂಸಾರ ಸಾಗರವ ತಾನು ದಾಂಟಿ ತನ್ನ ನಂಬಿದವರನ್ನು ದಾಂಟಿಸುವಂತೆ ಸಮರ್ಥನಾದ ಬ್ರಹ್ಮನಿಷ್ಠನೀಗ ಗುರುವೆನಿಸುವನು, ಇಂಥಾ ಗುರುವಿನ ಸಮೀಪಕ್ಕೆ ಮೋಕ್ಷಾಪೇಕ್ಷೆಯುಳ್ಳ ಶಿಷ್ಯನು ಹೋಗಿ ಸಾಷ್ಟಾಂಗವೆರಗಿ ಭಯಭಕ್ತಿಯುಕ್ತನಾಗಿ ಗುರುವಿನ ಸೇವೆಗೆಲಸದವನಾಗಿ ಓ ಗುರುಸ್ವಾಮಿಯೇ ಸಂಸಾರದಲ್ಲಿ ಬಹುಕಾಲ ನೊಂದೆನು ನನಿಗೆ ಬ್ರಹ್ಮಜ್ಞಾನೋಪದೇಶವಂ ಮಾಡಿ ಉದ್ಧರಿಸಬೇಕೆಂದು ಬಿನ್ನೈಸಲಾಗಿ ಆಗ ಗುರುಗಳು ಶಿಷ್ಯನಸಾಧನ ಸಂಪನ್ನತೆಯನುನೋಡಿ ಇವ ಮುಖ್ಯಾಧಿಕಾರಿಯಾದಡೆ ಶೀಘ್ರದಲ್ಲಿ ಉಪದೇಶವಂಮಾಡುವರು ಮಂದುವೇಳೆ ಮಂದಾಧಿಕಾರಿಯಾದಡೆ ಕೆಲವುಕಾಲ ಪರೀಕ್ಷಿಸಿ ಮಾತನಾಡಿಸದೆ ಉಪೇಕ್ಷೆಯ ಮಾಡಿದಾಗ್ಯೂ ಬಿಡದೆ ಹೊಂದಿಕೊಂಡಿರುವವನಾದರೆ ಆಗ ಇವನು ಬ್ರಹ್ಮ ಸಾಧಿಸಾನು ಎಂದು ಕರುಣದಿಂದುಪದೇಶವಂ ಮಾಡುವರು ಗುರುಸೇವಾರ್ಥನಾಗಿ ಸಾನ್ನಿಧ್ಯ ಹೊಂದಿದ ವಿಶೇಷದಿಂದ ಗುರುಗಳು ತಮಗೋಸ್ಕರ ಮಾಡುವ ಶ್ರವಣಮನನಾದಿಗಳನ್ನು ಸತ್ಕರ್ಮಾನುಷ್ಠಾನಗಳನ್ನು ನೋಡಿ ಆದರಿಂ ಶಿಷ್ಯನಿಗೆ ಮೂರುಪಾಲು ಸಾಧನೆಗಳೆಳವಟ್ಟು ಸಾಧನಸಂಪನ್ನನಾಗುವನು ಆಗ ಗುರುಗಳಿಗೆ ದಯಾರಸ ಉಂಟಾಗಿ ಉಪದೇಶವ ಮಾಡುವರು ಇಷ್ಟುಬಗೆಯಲ್ಲಿ ಯಾಕೆ ಪರೀಕ್ಷೆಯಂಮಾಡಬೇಕು ಎಂದು ಮಾತ ಹೇಳಬಾರದೆ ಯೆಂದರೆ ಕಸದಹತ್ತಿ ಬತ್ತಿಯಾಗಿ ಗಸಿಯೆಣ್ಣೆಯಾಗಿ ಇದ್ದ ದೀಪವು ಹ್ಯಾಗೆ ಪ್ರಕಾಶಿಸದೋ ತಿಳಿಯೆಣ್ಣೆಯಾಗಿ ಶೋಧಿಸಿದ ಹತ್ತಿಯ ಬತ್ತಿಯಾಗಿದ್ದ ದೀಪವು ಹ್ಯಾಗೆ ಪ್ರಕಾಶವಾಗುವದೋ ಹಾಗೆಯೇ ಮಂದಾಧಿಕಾರಿಗೆ ಉಪದೇಶವ ಮಾಡಿದರೆ ಆ ಬ್ರಹ್ಮೋಪದೇಶವು ವ್ಯರ್ಥವಾಗಿ (ಶಿಷ್ಯಪಾಪಂಗುರೋರಪಿ) ಎಂಬ ಹಾಗೆಯೇ ಬರುವದಾದ್ದರಿಂದ ಸಾಧನಚತುಷ್ಟಯ ಸಂಪನ್ನನಾದ ಶಿಷ್ಯನೇ ಅಧಿಕಾರಿಯು ಅವನಿಗೆ ಮಾಡಿದ ಬ್ರಹ್ಮೋಪದೇಶವು ಪ್ರಕಾಶಿಸುವದು ಉಪದೇಶ ಪ್ರಕಾರ ಹ್ಯಾಗೆಂದರೆ ಹೇಳುವೆವು ಬಾರೈಯ್ಯಾ ಶಿಷ್ಯನೇ ಯೆಂಬದಾಗಿ ಗುರುಗಳು ಕರದು ಸಂಸಾರಸಾಗರವನ್ನು ದಾಂಟಿ ಜೀವನ್ಮುಕ್ತನಹದಕ್ಕೆ ಜೀವ ಬ್ರಹ್ಮೈಕ್ಯವ ಪಡವಡೆ ಮುಕ್ತಿಯೆಂದು ಹೇಳಲಾಗಿ ಆಗ ಶಿಷ್ಯ

ನು ಸ್ವಾಮಿ ಜೀವ ಬ್ರಹ್ಮರಿಗೆ ಐಕ್ಯ ಹ್ಯಾಗೆ ಆದೀತು ಅದಕ್ಕೆ ಸಾಧನ ವೇನು ಯೆಂದು ಕೇಳಲಾಗಿ ಆಗ ಗುರುಗಳ ತತ್ವಮಸ್ಯಾದಿ ಮಹಾ ವಾಕ್ಯಾರ್ಥವ ತಿಳಿಯುವದೇ ಸಾಧನವೆಂದು ಹೇಳಲಾಗಿ ಮಹಾ ವಾಕ್ಯವ ಅನೇಕವೇಳೆ ಕೇಳಿಯು ಜೀವನ್ಮುಕ್ತಿಯಾಗಲಿಲ್ಲವಲ್ಲಾ ಯೆಂದು ಶಿಷ್ಯನು ಬಿನ್ನೈಸಲಾಗಿ ಪದಾರ್ಥವ ತಿಳಿಯದಲ್ಲದೆ ವಾಕ್ಯಾರ್ಥವಾಗದು ಯೆಂದು ಗುರುಗಳು ನಿರೂಪಿಸಲಾಗಿ ಹಾಗಾದರೆ ಪದಾರ್ಥವೆಂದರೆ ಏನು ಎಂದು ಶಿಷ್ಯ ಬೆಸಗೊಂಡನು ತತ್, ತ್ವಂ, ಅಸಿ ಯೆಂದು ಮೂರು ಪದಗಳು ತತ್ ಯೆಂದರೆ ಬ್ರಹ್ಮ ತ್ವಂ ಅಂದರೆ ಜೀವ ಅಸಿ ಯೆಂದರೆ ಜೀವನೇ ಬ್ರಹ್ಮನೆಂದು ಸೂಚಿಸುವದು ತತ್ಪದ ತ್ವಂಪದಗಳೆರಡೆ ಶೋಧನೆ ಮಾಡುವಂಥಾದ್ದು ಪದಗಳ ಶೋಧನೆ ಮಾಡುವಲ್ಲಿ ವಾಚ್ಯಾರ್ಥ ಲಕ್ಷ್ಯಾರ್ಥವೆಂದು ಎರಡು ಪ್ರಕಾರವಾಗಿ ಜೀವನ ಸ್ವರೂಪವ ತಿಳಿಯದಲ್ಲದೆ ಬ್ರಹ್ಮಸ್ವರೂಪವ ತಿಳಿಯಕೂಡದಾದಕಾರಣ ಜೀವನ ಸ್ವರೂಪ ಹೇಳುವದಕ್ಕೆ ವಾಚ್ಯಾರ್ಥವೇನಂದರೆ ದೇಹೇಂದ್ರಿಯ ಮನಃಪ್ರಾಣಾದಿಗಳಲ್ಲಿ ಶಿಷ್ಟನಪ್ಪದೆ ವಾಚ್ಯಾರ್ಥವೆನಿಸುವದು, ಆತತ್ವಗಳ ಬೇರ್ಪಡಿಸಿ ಸಾಕ್ಷಿಚೈತನ್ಯನಾದ ಪ್ರತ್ಯಗಾತ್ಮನ ತಿಳಿವದೆ ಲಕ್ಷ್ಯಾರ್ಥವೆನಿಸುವದು, ಹಾಗೆ ಮಾಯೋಪಾಧಿಸ್ತನಾದ ಈಶ್ವರನಿಗೂ ಮಾಯೋಪಾದಿಯಿಂದ ಸರ್ವಜ್ಞತ್ವ ಸರ್ವೇಶ್ವರತ್ವ ಸರ್ವಾಂತರ್ಯಾಮಿತ್ವ ಸರ್ವಸೃಷ್ಟಿಸ್ಥಿತಿ ಸಂಹಾರ ಕರ್ತ್ವಾದಿಗಳಲ್ಲಿ ವಿಶಿಷ್ಟನಪ್ಪದೇ ವಾಚಾರ್ಥವು. ಈ ಉಪಾಧಿಗಳು ಕಳೆದು ಶುದ್ಧ ಚೈತನ್ಯವ ಲಕ್ಷಿಸುವದತತ್ಪದಕ್ಕೆ ಲಕ್ಷ್ಯಾರ್ಥವು ಇದೇ ಕಾರ್ಯೋಪಾದಿಯೆಂತಲೂ ಕಾರಣೋಪಾಧಿಯೆಂತಲೂ ವಿದ್ಯಾವಿದ್ಯಗಳೆಂತಲೂ ಹೇಳಲ್ಪಡುವದು. ಈ ಉಪಾಧಿದ್ವಯವನು ಕಳೆದಲ್ಲಿ ಚೈತನ್ಯ ವಂದಾಗಿ ತೋರ್ಪುದು ಆಗ ಈ ಉಪಾಧಿದ್ವಯದಲ್ಲಿ ಈ ಹೊಳದ ಚೈತನ್ಯವು ತಾನೆಯೆಂಬ ಜ್ಞಾನನಿಲುಕಡೆಯಾಗಿ ಜೀವಭ್ರಾಂತಿ ಯಳಿದು ಮುಕ್ತನಾಗುನು ಯೆಂದು ಗುರುಗಳು ನಿರೂಪಿಸುವರು ಆಗ ಶಿಷ್ಯನು ಮತ್ತೆ ಗುರುಗಳಂಘ್ರಿಗಳಿಗೆರಗಿ ಸ್ವಾಮಿ ಜೀವನಿಗೆ ಉಪಾಧಿಯಾದ ಕಾರ್ಯೋಪಾಧಿಯು ಯೆಷ್ಟು ವಿಧವಾಗಿಹುದು ಯೆಂದು ಬೆಸಗೊಳ್ಳಲಾಗಿ ಆ ವಿವರಗಳನ್ನು ಗುರುಗಳು ನಿರೂಪಿಸಿದರು ಅನ್ನಮಯ ಪ್ರಾಣಮಯ ಮನೋಮಯ ವಿಜ್ಞಾನಮಯ ಆನಂದಮಯವೆಂದು ಪಂಚಕೋಶಗಳು ಇವರಲ್ಲಿ ಸ್ಥೂಲ ಶರೀರವೆ ಅನ್ನಮಯಕೋ

ಶವೆನಿಸುವದು ಪ್ರಾಣಪಂಚಕವು ಕರ್ಮೇಂದ್ರಿಯ ಪಂಚಕವುಕೂಡಿ ಪ್ರಾ
ಣಮಯಕೋಶವೆನಿಸುವದು ಜ್ಞಾನೇಂದ್ರಿಯ ಪಂಚಕವು ಮನಸ್ಸು ಕೂ
ಡಿ ಮನೋಮಯ ಕೋಶವೆನಿಸುವದು ಇದೇ ಜ್ಞಾನೇಂದ್ರಿಯ ಪಂಚಕವು
ಬುದ್ಧಿ ಯುಕೂಡಿ ವಿಜ್ಞಾನಮಯ ಕೋಶವೆನಿಸುವದು ಅಜ್ಞಾನವು ಆನಂ
ದವು ಕೂಡಿ ಆನಂದಮಯ ಕೋಶವೆನಿಸುವದು ಅನ್ನಮಯ ಕೋಶವಾ
ದ ಸ್ಥೂಲಶರೀರ ವಂದೇ ಆರುಕೋಶವೆನಿಸುವದು ಅದು ಆವಾವುವೆಂಪರೆ
ಚರ್ಮ ಮಾಂಸ ರಕ್ತಗಳೆಂದು ಮೂರು ಮಾತೃ ಸಮ್ಬಂಧ ಅಸ್ತಿ ಮೇದ
ಸ್ಸು ಮಜ್ಜೆಯುಂದು ಮೂರು ಪಿತೃಸಮ್ಬಂಧ ಇವು ಎರಡು ಕೂಡಿ ಷ
ಟ್ಕೋಶ ಪಿಂಡವೆನಿಸುವದು ಈ ಸ್ಥೂಲ ಶರೀರಕ್ಕೆ ಅಸ್ತಿಜಾಯತೆ
ವರ್ಧತೆ ಪರಿಣಮಿಂತ ಅಪಕ್ಷೀಯತೆ ನಾಶ್ಯತೆ ಎಂದು ಆರು ವಿ
ಕಾರವು ಹ್ರಸ್ವದೀರ್ಘಕೃಶ ಸ್ಥೂಲವೆಂದು ನಾಲ್ಕು ಪ್ರಕಾರವಾಗಿ
ರುವದು ಜರಾ ಮರಣ ಧರ್ಮಗಳುಳ್ಳದ್ದು ಜಡವಾಗಿಹುದು ಸುಷುಪ್ತಿಮೂ
ರ್ಛಾವರಣ ಕಾಲದಲ್ಲಿ ಜೀರ್ಣಿಟ್ಟು ಇರುವದು ಇಂಥಾ ಕ್ಷಣಬಂಗುರವಾದ
ಶರೀರವ ನನ್ನದೆಂದು ಅಭಿಮಾನಿಸಲಾಗಿ ಜೀವನಿಗೆ ಕೋಶವೆನಿಸಿ ಬಾಳ
ಯೆ ದಿಂಡಿಗೆ ಪಟ್ಟೆಗಳು ಮುಚ್ಚಿಕೊಂಡ ಹಾಗೆ ಮತ್ತೂ ಮುಚ್ಚಿಕೊಂಡಿ
ಹುದು ಜರಾಮರಣಗಳೆರಡು ದೇಹಧರ್ಮಗಳುಕ್ಷುತ್ಪಿಪಾಸಾದಿಗಳೆರಡು
ಮನೋಧರ್ಮಗಳು ಇವುಗಳೇ ಷಡೂರ್ಮಿಗಳು ಅಂಧಬಧಿರ ಮೂಕ ಕುಂ
ಟ ಮೊದಲಾದವು ಇಂದ್ರಿಯ ಧರ್ಮಂಗಳು ಸಂಶಯ ನಿಶ್ಚಯ ಅಹಂಕಾ
ರ ಅಲೋಚನೆಯೆಂದು ಅಂತಃಕರಣ ಧರ್ಮಗಳು ಕಾಮ ಕ್ರೋಧ ಲೋಭ
ಮೋಹ ಮದ ಮತ್ಸರಗಳೆಂದು ಅರಿಷಡ್ವರ್ಗಗಳು ಇವೆಲ್ಲಾ ಜೀವನಿಗೆ
ಉಪಾಧಿಯನಿಸುವದು ಸ್ಥೂಲ ಸೂಕ್ಷ್ಮ ಕಾರಣಗಳೆಂದು ತನುತ್ರಯಗ
ಳು ಅನ್ನಮಯ ಕೋಶವೇ ಸ್ಥೂಲತನು ವೆನಿಸಿಕೊಂಬುವದು ಜ್ಞಾನೇಂ
ದ್ರಿಯ ಪಂಚಕವು ಕರ್ಮೇಂದ್ರಿಯ ಪಂಚಕವು ಪ್ರಾಣಪಂಚಕವು ಮನಸ್ಸು
ಬುದ್ಧಿ ಮುಂತಾದ ಈ ಹದಿನೇಳು ತತ್ವಗಳು ಕೂಡಿ ಸೂಕ್ಷ್ಮತನುವೆನಿ
ಸುವದು ಇದೇ ಲಿಂಗಶರೀರವೆಂದು ಹೆಸರು ಇದೇ ಸ್ಥೂಲ ಶರೀರವಬಿ
ಟ್ಟು ಮತ್ತೊಂದು ಶರೀರ ಪಡೆವುದು ಸ್ವರ್ಗ ನರಕಾದಿಗಳಲ್ಲಿ ಯಡೆಯಾ
ಡುವದು ಈಶ್ವರ ಕಟಾಕ್ಷ ಗುರುವಿನ ಅನುಗ್ರಹವು ಪಡದವನೆ ಈಲಿಂ
ಗ ಶರೀರದೊಡನೆ ಮುಕ್ತನಾಗುವನು ಆ ಪರಿಯಂತರ ಪುಣ್ಯ ಪಾಪಗಳೆ

ರಡೂ ಮಿಶ್ರಗಳಾಗಿ ಸ್ವರ್ಗ ನರಕಗಳಲ್ಲಿ ಅನುಭವಿಸಿ ಶೇಷಕರ್ಮ ಭೋಗಕ್ಕಾಗಿ ಜನ್ಮಕ್ಕೆ ಬರುವದು ಮುಕ್ತನಾಗುವದಕ್ಕೂ ಫಲಗಳು ಅನುಭವಿಸುವದಕ್ಕೂ ಲಿಂಗಶರೀರವೇ ಕಾರಣವಾದ್ದು ಮೂಲಕಾರಣವಾದ ಆ ವಿದ್ಯೆಯೆ ಕಾರಣ ಶರೀರವೆನಿಸುವದು, ಈ ತನುತ್ರಯಗಳಲ್ಲಿ ಸತ್ವರಜತಮಗುಣಗಳು ಪಾಧಿಯಿಂದ ಜಾಗ್ರತ್ಸ್ವಪ್ನ ಸುಷುಪ್ತಿಗಳೆಂದು ಅವಸ್ಥಾತ್ರಯಗಳಹವು ಜಾಗ್ರದಾವಸ್ಥೆಯಲ್ಲಿ ವಿಶ್ವನೆಂತಲೂ ಸ್ವಪ್ನಾವಸ್ಥೆಯಲ್ಲಿ ತೈಜಸನೆಂತಲೂ ಸುಷುಪ್ತ್ಯವಸ್ಥೆಯಲ್ಲಿ ಪ್ರಾಜ್ಞನೆಂತಲೂ ಈ ಜೀವನಿಗೆ ಮೂರುಹೆಸರು ಇದೇ ಜೀವನಿಗೆ ವ್ಯಾವಹಾರಿಕ ಪ್ರಾತಿಭಾಷಿಕ ಪಾರಮಾರ್ಥಿಕನೆಂದು ಮೂರುಹೆಸರು ಚಿದಾಭಾಸ ಸ್ವಪ್ನಕಲ್ಪಿತ ಅವಛಿನ್ನನೆಂತಲೂ ಮೂರು ಹೆಸರು ಈ ರೀತಿಯಲ್ಲಿ ಉಪಾಧಿಯಿಂದಲೂ ವರ್ತಮಾನದಿಂದಲೂ ಒಬ್ಬನಿಗೆ ಒಂಬತ್ತು ಹೆಸರಾಯಿತು ಈ ಉಪಾಧಿಗಳಲ್ಲಿ ಅಭಿಮಾನಿಸಲಾಗಿ ಜೀವನಿಗೆಇವೆಲ್ಲನೂ ಉಪಾಧಿಗಳಾದವು ಇವೆ ಮಾಯೂಕಾರ್ಯವಾದಕಾರಣ ಅನೃತ ಜಡದುಃಖಾತ್ಮಕವಾಗಿ ಅನಾತ್ಮವರ್ಗವೆನಿಸುವವು ಈ ಅನಾತ್ಮ ವರ್ಗವಾದ ದೇಹೇಂದ್ರಿಯಾದಿಗಳ ನರಿವರಿವೆ ಆತ್ಮನೆನಿಸುವದು ಆ ಅರಿವೆಯೇ ತಾನೆಂದು ನಿಶ್ಚೈಸಿ ಜೀವನ್ಮುಕ್ತನಹನು. ಈರೀತಿಯಲ್ಲಿ ನಿನ್ನನು ನೀನೆಂದು ತಿಳಿದು ನಿಜಸುಖವಂ ಕಂಡು. ಮುಕ್ತನಾಗಿ ಸುಖಸ್ವರೂಪನಾಗೆಂದು ಗುರುಗಳು ನಿರೂಪಿಸಲಾಗಿ ಶಿಷ್ಯನು ಜೀವಭ್ರಾಂತಿ ಯಳಿದು ಸಚ್ಚಿದಾನಂದ ನಿತ್ಯ ಪರಿಪೂರ್ಣವಾದ ಪರಮೇಶ್ವರನೇ ತಾನಾಗಿನಿಂದನು-

ಪಂಚೀಕರಣ ಪ್ರಥಮಧ್ಯಾಯ ಸಂಪೂರ್ಣ ವಾದುದು.

ಎರಡನೇ ಅಧ್ಯಾಯವು

ಮತ್ತು ಆ ಶಿಷ್ಯನು ಗುರುಗಳಂಘ್ರಿಗೆ ನಮಿಸಿ ಆತ್ಮಾನಾತ್ಮ ವರ್ಗಗಳಾದ ತನುಮನಃ ಪ್ರಾಣಾದಿಗಳ ಉತ್ಪತ್ತಿಯಂ ತಿಳಿದಲ್ಲದೆ ಅಭಿಮಾನ ಬಿಡುವದಕ್ಕೆ ಉಪಾಯವಿಲ್ಲವಾದ ಕಾರಣ ತನುಮನಾದಿಗಳು ಹುಟ್ಟಿದ ಬಗೆ ಹೀಗೆಂಬುದಂ ನಿರೂಪಿಸಬೇಕೆಂದು ಬಿನ್ನೈಸಲಾಗಿ ಆಗ ಗುರುಗಳು ಪಂಚೀಕರಣದಲ್ಲಿ ತಿಳುಹಿಸಿದರು ಅದು ಹ್ಯಾಗಂದರೆ ಆದಿ ಮಧ್ಯಾಂತಂಗಳಿಲ್ಲದ ನಾದಿಯಹ ನಿರ್ಗುಣ ನಿರಂಜನ ನಿರ್ವಿಕಲ್ಪನಾದ ಪರಬ್ರಹ್ಮವು

ಇನ್ದಾತ್ರಿದ್ದಾಮ ಆ ಪರಬ್ರಹ್ಮನಲ್ಲಿ ಸ್ವಯಂಪ್ರಕಾಶವೇನಾನು ಯಂಬದೊಂ
ದ್ಯೋಚನೆಯು ತೋರಿತು ಆ ಅಭಿಸಂಧಿಯಲ್ಲಿ ಒಂದು ಶಕ್ತಿ ಹುಟ್ಟಿತು
ಆ ಶಕ್ತಿಗೆ ಚಿಚ್ಛಕ್ತಿಯಂತಲೂ ಪರಶಕ್ತಿಯಂತಲೂ ಆದಿಶಕ್ತಿಯಂತಲೂ
ಇಚ್ಛಾಶಕ್ತಿಯಂತಲೂ ಕ್ರಿಯಾಶಕ್ತಿಯಂತಲೂ ಜ್ಞಾನಶಕ್ತಿಯಂತಲೂ ಆ
ರುಹೆಸರು ಆ ಶಕ್ತಿಯೇ ಸತ್ವರಜಸ್ತಮ ಗುಣಗಳು ಮೂರು ಸಮ
ವಾಗಿ ಇದ್ದಲ್ಲಿ ಪ್ರಕೃತಿಯೆಂಬ ಹೆಸರು ಸತ್ವಗುಣ ಪ್ರಧಾನವಾದಾಗ ಮಾ
ಯೆಯೆಂದು ಹೆಸರಾಯಿತು ಆ ಮಾಯೆಯಲ್ಲಿ ಹೊಳದ ಚೈತನ್ಯಕ್ಕೆ ಈಶ್ವ
ರನೆಂದು ಹೆಸರು ಈಶ್ವರನು ರಜೋಗುಣ ತಮೋಗುಣ ಪ್ರಧಾನವಾದ
ಜಡಾಂಶವಾದ ಪ್ರಕೃತಿಯು ಈಕ್ಷಿಸ್ತನು ಆ ನೋಟದಿಂದ ಗರ್ಭಿಣಿಯಾ
ಗಿ ಮಹಾ ತತ್ವವೆನಿಸಿತು ಆ ಮಹಾತತ್ವದಿಂದ ಸತ್ವಾಹಂ ಕಾ
ರ ರಜೋಹಂಕಾರ ತಮೋಹಂಕಾರವೆಂದು ಮೂರು ಅಹಂಕಾರಗ
ಳು ಹುಟ್ಟಿದವು ಆ ಅಹಂಕಾರಗಳ ಸಮುದಾಯದಿಂದ ತ್ರಿಗುಣಾತ್ಮಕ
ವಾದ ಶಬ್ದ ತನ್ಮಾತ್ರೆ ಹುಟ್ಟಿತು ಆ ಶಬ್ದ ತನ್ಮಾತ್ರೆಯಿಂದ ತ್ರಿಗುಣಾತ್ಮಕ
ವಾದ ಆಕಾಶ ಹುಟ್ಟಿತು ಆ ಆಕಾಶದಿಂದ ತ್ರಿಗುಣಾತ್ಮಕವಾದ ಸ್ಪರ್ಶ
ತನ್ಮಾತ್ರೆ ಹುಟ್ಟಿತು ಆ ಸ್ಪರ್ಶತನ್ಮಾತ್ರೆಯಿಂದ ತ್ರಿಗುಣಾತ್ಮಕನಾದ ವಾ
ಯು ಹುಟ್ಟಿತು ಆ ವಾಯುವಿನಿಂದ ತ್ರಿಗುಣಾತ್ಮಕನಾದ ರೂಪತನ್ಮಾ
ತ್ರೆ ಹುಟ್ಟಿತು ಆ ರೂಪ ತನ್ಮಾತ್ರೆಯಿಂದ ತ್ರಿಗುಣಾತ್ಮಕನಾದ ಅಗ್ನಿ ಹು
ಟ್ಟಿತು ಆ ಅಗ್ನಿಯಿಂದ ತ್ರಿಗುಣಾತ್ಮಕವಾದ ರಸ ಹುಟ್ಟಿತು ಆ ರಸತನ್ಮಾ
ತ್ರೆಯಿಂದ ತ್ರಿಗುಣಾತ್ಮಕವಾದ ಅಪ್ಪು ಹುಟ್ಟಿತು ಆ ಅಪ್ಪುವಿನಿಂದ ತ್ರಿಗು
ಣಾತ್ಮವಾದ ಗಂಧತನ್ಮಾತ್ರೆ ಹುಟ್ಟಿತು ಆ ಗಂಧತನ್ಮಾತ್ರೆಯಿಂದ ತ್ರಿಗುಣಾ
ತ್ಮಕವಾದ ಪೃಥ್ವೀ ಹುಟ್ಟಿತು ಈ ರೀತಿಯಲ್ಲಿ ಪಂಚತನ್ಮಾತ್ರೆಗಳಿಂದ ಪಂ
ಚಮಹಾ ಭೂತಂಗಳು ಹುಟ್ಟಿದವು ಈ ಪಂಚಮಹಾಭೂತಂಗಳು ಯೆ
ರಡು ಭಾಗವಮ್ಮಾಡಿ ಅದರಲ್ಲಿ ನಿಜಾಂಶವಾದ ಐದು ಭಾಗವಬಿಟ್ಟು ಉ
ಳಿದ ಐದು ಭಾಗಗಳ ವಂದೊಂದರಲ್ಲಿ ಮರಳಿ ನಾಲ್ಕು ಭಾಗವಮ್ಮಾ
ಡಿ ನಿಜಾಂಶ ಸಹ ಇಪ್ಪತ್ತೈದು ತತ್ವಗಳಾದವು ಆದಬಗೆ ಹೇಗೆಯೆಂದ
ರೆ ನಿರೂಪಿಸೇವು ಆಕಾಶಾದಿ ಪೃಥ್ವೀಪರಿಯಂತ ನಿಜಾಂಶಗಳವೊಂದೊಂ
ದರಲ್ಲಿ ಅರ್ಧವುಳಿಸಿ ವಿಕಾಸ್ತಿದ ಅರ್ಧಗಳಲ್ಲಿ ನಾಲ್ಕು ನಾಲ್ಕು ಭಾಗವಾಗಿ
ವುಳಿದಿದ್ದ ಅರ್ಧಗಳಲ್ಲಿ ಬೆರಸಲಾಗಿ ವಂದು ಅಂಶದ ಸಂಗದಿಂದ ವಂದು

ಹೆಸರುಪಡೆಯಿತು ಈ ಪ್ರಕಾರ ನಾಲ್ಕು ಸಂಗಡಿಂದ ನಾಲ್ಕು ಹೆಸರು ಪಡೆ
ದು ತನ್ನ ಸಹಜವಾದ ಹೆಸರು ಕೂಡಿ ಐದು ಹೆಸರುಳ್ಳ ಈ ಭಾಗಗಳು ಅಂತ
ತ್ವವೆನಿಸಿಕೊಂಡು ಪಂಚೀಕರಣವಾಯಿತು ಆಕಾಶ ಅರ್ಧಾಂಶದಲ್ಲಿ ವಾ
ಯುವಿನ ಪಂಪಂಶಕೂಡಿ ಮನಸ್ಸಾಯಿತು ಅಗ್ನಿಯ ಪಂದಂಶಕೂಡಿ ಬು
ದ್ಧಿಯಾಯಿತು ಅಪ್ಪುವಿನಪಂದಂಶಕೂಡಿಚಿತ್ತವಾಯಿತು ಪೃಥ್ವಿಯದೊಂ
ದಂಶಕೂಡಿ ಅಹಂಕಾರವಾಗಿಮನೋಬುದ್ಧಿ ಚಿತ್ತ ಅಹಂಕಾರಾಕಾಶವಾ
ಯಿತು ॥೧॥ ವಾಯುವಿನಲ್ಲಿ ಆಕಾಶ ಪಂದಂಶಕೂಡಿ ಸಮಾನವಾಯಿತು
ಅಗ್ನಿಯ ದೊಂದಂಶಕೂಡಿ ವ್ಯಾನವಾಯಿತು ಅಪ್ಪುವಿನೊಂದಂಶಕೂಡಿ
ಅಪಾನವಾಯಿತು ಪೃಥ್ವಿಯದೊಂದಂಶಕೂಡಿಪ್ರಾಣವಾಗಿಪ್ರಾಣಾಪಾನ
ವ್ಯಾನವುದಾನಸಮಾನವಾಯಿತು ॥೨॥ ಅಗ್ನಿಯಲ್ಲಿ ಆಕಾಶಪಂದಂಶಕೂಡಿ
ಶ್ರೋತ್ರವಾಯಿತು ವಾಯುವಿನ ಪಂದಂಶಕೂಡಿ ತ್ವಕ್ಕು ಆಯಿತು ಅಪ್ಪುವಿ
ನದೊಂದಂಶಕೂಡಿ ಜಿಹ್ವೆ ಆಯಿತು ಪೃಥ್ವಿಯದೊಂದಂಶಕೂಡಿ ಆಘ್ರಾ
ಣವಾಗಿ ಶ್ರೋತ್ರ ತ್ವಕ್ಚಕ್ಷುಜಿಹ್ವಾಘ್ರಾಣ ವಾಯಿತು ॥೩॥ ಅಪ್ಪುವಿನಲ್ಲಿ
ಆಕಾಶಪಂಪಂಶಕೂಡಿ ಶಬ್ದವಾಯಿತು ವಾಯುವಿನಪಂದಂಶಕೂಡಿ ಸ್ಪರ್ಶ
ವಾಯಿತು ಅಗ್ನಿಯ ದೊಂದಂಶಕೂಡಿ ರೂಪವಾಯಿತು ಪೃಥ್ವಿಯದೊ
ಂದಂಶಕೂಡಿ ಗಂಧವಾಗಿ ಶಬ್ದ ಸ್ಪರ್ಶರೂಪ ರಸ ಗಂಧವಾಯಿತು ॥೪॥
ಪೃಥ್ವಿಯಲ್ಲಿ ಆಕಾಶದೊಂದಂಶ ಕೂಡಿ ವಾಕ್ಕು ಆಯಿತು, ವಾಯುವಿನ
ದೊಂದಂಶಕೂಡಿ ಪಾಣಿ ಆಯಿತು, ಅಗ್ನಿಯದೊಂದಾಂಶ ಕೂಡಿ ಪಾದ
ವಾಯಿತು, ಅಪ್ಪುವಿನದೊಂದಂಶ ಕೂಡಿ ಯುಪಸ್ಥವಾಗಿ ವಾಕ್ಪಾಣಿಪಾ
ದಾಪಾಯೂಪಸ್ಥಗಳಾದವು ॥೫॥ ಆಕಾಶಾದಿ ಪೃಥ್ವಿಪರಿಯಂತರ ನಿಜಭೂ
ತಂಗಳಲ್ಲಿ ಅರ್ಧ ನಿಲ್ಲಿಸಿ, ಮಿಕ್ಕಾದ ಅರ್ಧಗಳಲ್ಲಿ ನಾಲ್ಕು ನಾಲ್ಕು ಭಾಗ
ವಮಾಡಿ ಒಂದೊಂದು ಭಾಗವನ್ನೇ ಒಂದೊಂದರಲ್ಲಿ ಕೂಡಿಸಿದರೆ ಅದ ವಿ
ವರ ಯೇನಂದರೆ,-ಆಕಾಶ ಅರ್ಧಾಂಶವೇ ಜ್ಞಾತೃವೆಂಬ ಜೀವವಾಚಕವಾ
ಗಿ, ಇದರ ಬೇಳೆಸಾಲು ವಾಯುವಿನಲ್ಲಿ ಕೂಡಿ ಸಮಾನವಾಯಿತು, ಅಗ್ನಿ

ಯಲ್ಲಿ ಕೂಡಿ ಶ್ರೋತ್ರವಾಯಿತು ಅಪ್ಪುವಿನಲ್ಲಿ ಕೂಡಿ ಶಬ್ದವಾಯಿತು, ಪೃಥ್ವಿಯಲ್ಲಿ ಕೂಡಿ ವಾಕ್ಕುವಾಯಿತು ॥೧॥ ವಾಯುವಿನ ಅರ್ಧಾಂಶವೇ ಉದಾನವಾಗಿ ಇದರ ಬೇಳೇಪಾಲು ಆಕಾಶದಲ್ಲಿ ಕೂಡಿ, ಮನಸ್ಸು ಅಗ್ನಿಯಲ್ಲಿ ಕೂಡಿ, ತ್ವಕ್ಕು, ಅಪ್ಪುವಿನಲ್ಲಿ ಕೂಡಿ, ಸ್ಪರ್ಶ, ಪೃಥ್ವಿಯಲ್ಲಿ ಕೂಡಿ ಪಾಣಿಯಾಯಿತು. ಅಗ್ನಿ ಅರ್ಧಾಂಶವೆ ಚಕ್ಷುಸ್ಸಾಗಿ ಇದರ ಬೇಳೆ ಪಾಲು ಆಕಾಶದಲ್ಲಿ ಕೂಡಿ, ಬುದ್ಧಿ, ವಾಯುವಿನಲ್ಲಿ ಕೂಡಿ ವ್ಯಾನ, ಅಪ್ಪುವಿನಲ್ಲಿ ಕೂಡಿ ರೂಪ, ಪೃಥ್ವಿಯಲ್ಲಿ ಕೂಡಿ ಪಾದವಾಯಿತು ॥೨॥ ಅಪ್ಪುವಿನ ಅರ್ಧಾಂಶವೇ ರಸವಾಗಿ ನಿಂತದ್ದರಲ್ಲಿ ಬೇಳೇಪಾಲು ಆಕಾಶದಲ್ಲಿ ಕೂಡಿ ಚಿತ್ತ, ವಾಯುವಿನಲ್ಲಿ ಕೂಡಿ ಅಪಾನ, ಅಗ್ನಿಯಲ್ಲಿ ಕೂಡಿ ಜಿಹ್ವೆ, ಪೃಥ್ವಿಯಲ್ಲಿ ಕೂಡಿ ಯುಪಸ್ತವಾಯಿತು ॥೩॥ ಪೃಥ್ವಿ ಅರ್ಧಾಂಶವೆ ಗುದವಾಗಿ ನಿಂತಿದ್ದರಲ್ಲಿ ಬೇಳೆಪಾಲು ಆಕಾಶದಲ್ಲಿ ಬೆರದು ಅಹಂಕಾರ ವಾಯುವಿನಲ್ಲಿ ಬೆರದು ಪ್ರಾಣವು ಅಗ್ನಿಯಲ್ಲಿ ಬೆರದು, ಆಪ್ರಾಣವು ಅಪ್ಪುವಿನಲ್ಲಿ ಬೆರದು ಗಂಧವು ಆಯಿತು ॥೪॥ ಈಪ್ರಕಾರ ೨೪ತತ್ವಗಳಾದ ನಿಜಾಂಶಗಳು ನಾಲ್ಕು ಭೂತಗಳಲ್ಲಿ ಬೆರದ ಅಂಶೆಯು ಇದರ ಅಧಿದೇವತೆಗಳು ಮತ್ತು ತತ್ವಗಳ ಹೆಸರುಗಳು ಸಹ ಪೊಟ್ಟಿಗೆ ಪಂಚೀಕರಣದಲ್ಲಿ ತಿಳಿಯಬೇಕೆಂದು ಆಗ ಗುರುಗಳು ಚಕ್ರದಿಂದ ತಿಳಿಯಪಡಿಸಿದರು.

ಗ್ರಂಥಾಂತರಂಗಳಲ್ಲಿ ಶಿವನ ಮುಖ ಶಿರೊಳಗೆ ಪಾಚ ಭೂತಗಳು ಉತ್ಪತ್ತಿ–ಈಶಾನ ಮುಖದಲ್ಲಿ ಆಕಾಶ, ತತ್ಪುರುಷ ಮುಖದಲ್ಲಿ ವಾಯು ಅಘೋರಮುಖದಲ್ಲಿ ಅಗ್ನಿ, ವಾಮದೇವ ಮುಖದಲ್ಲಿ ಅಪ್ಪು. ಸದ್ಯೋಜಾತ ಮುಖದಲ್ಲಿ ಪೃಥ್ವಿ, ಈ ಪ್ರಕಾರ ಹುಟ್ಟಿದವು.

ಆಕಾಶ ಅರ್ಧಾಂಶವೆ ಜ್ಞಾತೃ.	ಮನಸ್ಸು ಚಂದ್ರನಧಿದೇವತೆ.	ಬುದ್ಧಿ ಬ್ರಹ್ಮನಧಿದೇವತೆ,	ಚಿತ್ತ ಕ್ಷೇತ್ರಜ್ಞನಧಿದೇವತೆ	ಅಹಂಕಾರ ರುದ್ರನಧಿದೇವತೆ,	ಆಕಾಶ ಮನಸ್ಸು ಬುದ್ಧಿ ಚಿತ್ತಹಂಕಾರ
ಸಮಾನ–ಜಯನಧಿದೇವತೆ.	ವಾಯುವು ಅರ್ಧಾಂಶವೆ ಉದಾನ ಅಜನಧಿದೇವತೆ.	ವ್ಯಾನ-ವಿಶ್ವಯೋನಿಯಧಿದೇವತೆ,	ಅಪಾನ ವಿಶ್ವಕರ್ಮನಧಿದೇವತೆ,	ಪ್ರಾಣ ವಸಿಷ್ಟನಧಿದೇವತೆ,	ಸಮಾನ, ಉದಾನ, ವ್ಯಾನ, ಅಪಾನ ಪ್ರಾಣ
ಶ್ರೋತ್ರ ದಿಕ್ಕು ಅಧಿದೇವತೆ.	ತ್ವಕ್ಕು-ವಾಯು ಅಧಿದೇವತೆ	ಅಗ್ನಿ ಅರ್ಧಾಂಶವೆ ಚಕ್ಷುಃ ಅರ್ಕನಧಿದೇವತೆ,	ಜಿಹ್ವಾ ಪ್ರಚೇತನಧಿದೇವತೆ,	ಆಘ್ರಾಣ ಅಧಿದೇವತೆ ಅಶ್ವಿನಿದೇವತೆ,	ಶ್ರೋತ್ರ ತ್ವಕ್ ಚಕ್ಷು ಜಿಹ್ವಾ ಘ್ರಾಣ,
ಶಬ್ದ.	ಸ್ಪರ್ಶ,	ರೂಪ,	ಅಪ್ಪು ಅರ್ಧಾಂಶವೆ ರಸ,	ಗಂಧ,	ಶಬ್ದ ಸ್ಪರ್ಶ; ರೂಪ, ರಸ-ಗಂಧ.
ವಾಕ್ಕು ವಹ್ನಿ ಅಧಿದೇವತೆ.	ಪಾಣಿ-ಇಂದ್ರನ ದಿದೇವತೆ.	ಪಾದ-ಉಪೇಂದ್ರನಧಿದೇವತೆ,	ಉಪಸ್ಥ ಪ್ರಜಾಪತಿಯಧಿದೇವತೆ,	ಪೃಥ್ವಿ ಅರ್ಧಾಂಶವೆ ಗುದವು ಮೃತ್ಯು ಅಧಿದೇವತೆ	ವಾಕ್ಕು ಪಾಣಿ ಪಾದ ಉಪಸ್ಥ ಪಾಯು,

ಮುಂದೆ ಈರೀತಿಯಲ್ಲಿ ಅಂತಃಕರಣಗಳೈದು, ಪ್ರಾಣಗಳೈದು, ಜ್ಞಾನೇಂದ್ರಿಯಗಳೈದು, ವಿಷಯಗಳೈದು, ಕರ್ಮೇಂದ್ರಿಯಗಳೈದು, ಅಂತು ಇಪ್ಪತ್ತೈದು ತತ್ವಗಳಾದವು, ಇವಕ್ಕೆ ವಿಷಯಗಳೇನು, ಅಧಿದೇವತೆಗಳ್ಯಾರು ಅಂದರೆ, ನಿರೂಪಿಸೇವು, ಜ್ಞಾತೃವಿಗೆ ಸಾಕ್ಷಿ ಯಧಿದೇವತೆ ಜ್ಞಾತೃವೇ ವಿಷಯ, ಅಹಂಕಾರಕ್ಕೆ, ಅಭಿಮಾನವೇ ವಿಷಯ, ರುದ್ರನಧಿದೇವತೆ, ಚಿತ್ತಕ್ಕೆ ಆಲೋಚನೆಯ ವಿಷಯ, ಕ್ಷೇತ್ರಜ್ಞನಧಿದೇವತೆ, ಬುದ್ಧಿಗೆ ಬೋಧವ್ಯವೇ ವಿಷಯ, ಬ್ರಹ್ಮನಧಿದೇವತೆ, ಮನಸ್ಸಿಗೆ ಮಂತವ್ಯವೆ ವಿಷಯ, ಚಂದ್ರನಧಿದೇವತೆ. ಮನವೇ ಸಂಶಯ ರೂಪು. ಬುದ್ಧಿ ನಿಶ್ಚಯ ರೂಪು, ಚಿತ್ತ ಆಲೋಚಿಸುವದು ಅಹಂಕಾರ ಅಭಿಮಾನಿಸುವದು, ಅಂತಃಕರಣವೇ ವೃತ್ತಿಭೇದದಿಂದ ನಾಲ್ಕು ವಿಧವಾಯಿತು. ಇನ್ನು ಜ್ಞಾನೇಂದ್ರಿಯಕ್ಕೆ ಹೇಗಂದರೆ, ಶ್ರೋತ್ರೇಂದ್ರಿಯಕ್ಕೆ ಶಬ್ದ ವಿಷಯ, ದಿಕ್ಕುಗಳೇ ಅಧಿದೇವತೆ, ತ್ವಗಿಂದ್ರಿಯಕ್ಕೆ ಸ್ಪರ್ಶವೇ ವಿಷಯ, ವಾಯುವು ಅಧಿದೇವತೆ, ನೇತ್ರೇಂದ್ರಿಯಕ್ಕೆ ರೂಪು ವಿಷಯ, ಸೂರ್ಯನಧಿದೇವತೆ, ಜಿಹ್ವೇಂದ್ರಿಯಕ್ಕೆ ರಸ ವಿಷಯ, ವರುಣನಧಿದೇವತೆ, ಘ್ರಾಣೇಂದ್ರಿಯಕ್ಕೆ ಗಂಧ ವಿಷಯ, ಪೃಥ್ವಿಯಧಿದೇವತೆ, ಮತ್ತು ಕರ್ಮೇಂದ್ರಿಯಕ್ಕೆ ಹೇಗಂದರೆ, ವಾಗೇಂದ್ರಿಯಕ್ಕೆ ವಕ್ತವ್ಯವೇ ವಿಷಯ, ಅಗ್ನಿಯಧಿದೇವತೆ, ಪ್ರಾಣೇಂದ್ರಿಯಕ್ಕೆ ಹಾನೋದಾನ ವಿಷಯ, ಇಂದ್ರನಧಿದೇವತೆ. ಪಾದೇಂದ್ರಿಯಕ್ಕೆ ಗಂತವ್ಯವೇ ವಿಷಯ, ಉಪೇಂದ್ರನಧಿದೇವತೆ, ಪಾಯುರಿಂದ್ರಿಯಕ್ಕೆ ವಿಸರ್ಗವೇ ವಿಷಯ ಮೃತ್ಯುಯಧಿದೇವತೆ, ಉಪಸ್ಥೇಂದ್ರಿಯಕ್ಕೆ ಆನಂದವೇ ವಿಷಯ, ಪ್ರಜೇಶ್ವರನಧಿದೇವತೆ, ಪ್ರಾಣಪಂಚಕಕ್ಕೆ ಯಾವದೆಂದರೆ ನಿರೂಪಿಸೇವು, ಪ್ರಾಣ ಹೃದಯದಲ್ಲಿ ಇದ್ದು ಉಚ್ಛ್ವಾಸ ನಿಶ್ವಾಸವ ಮಾಡುವದು ವಿಶಿಷ್ಟನಧಿದೇವತೆ, ಅಪಾನ ಗುದಸ್ಥಾನದಲ್ಲಿದ್ದು ವಿಸರ್ಗಕ್ರಿಯೆ ಪಡುವದು ವಿಶ್ವಕರ್ತನಧಿದೇವತೆ, ವ್ಯಾನ ಸರ್ವ ಶರೀರದಲ್ಲಿದ್ದು ಶರೀರಧಾರಣಮಾಡುವದು ವಿಶ್ವಯೋನಿನಧಿದೇವತೆ, ಉದಾನ ಕಂಠದಲ್ಲಿದ್ದು ಉದ್ಗಾರವ ಮಾಡುವದು ಅಜನಧಿದೇವತೆ, ಸಮಾನ ನಾಭಿಸ್ಥಾನದಲ್ಲಿದ್ದು ಉಂಡನ್ನಪಾನಾದಿಗಳ ಯಪ್ಪತ್ತೆರಡು ಸಾವಿರ ನಾಡಿಗಳಿಗೂ ಹಂಚಿಕೊಡುವದು ಇದಕ್ಕೆ ಜಯನಧಿದೇವತೆ. ನಾಗ ಕೂರ್ಮ ಕೃಕರ ದೇವದತ್ತ ಧನಂಜಯನೆಂದು ಐದು ಉಪವಾಯುಗಳು, ನಾಗವಾಯುವು ವಮನವು ಉರದು ಆಕಳಿಸುವ ಹಾ

ಗೆ ಮಾಡುವದು. ಕೂರ್ಮವಾಯುವು ಕಣ್ಣು ಮುಚ್ಚಿ ಕಣ್ಣು ಬಿಡುವ ಹಾಗೆ ಮಾಡುವದು. ಕೃಕರವಾಯುವು ಶೀನು, ಕೆಮ್ಮು, ಬರುವಹಾಗೆ ಮಾಡುವದು. ದೇವದತ್ತವಾಯುವು ನಗೆಯನಾಡಿಯ ಸುಂಟುಮಾಡುವದು, ಧನಂಜಯ ವಾಯುವು ಶೋಜ ರೋಗವನ್ನುಂಟು ಮಾಡಿ ಮೃತ ಶರೀರದಲ್ಲಿ ಐದು ದಿವಸ ಇದ್ದು ದೇಹವ ನೊಡದುಕೊಂಡು ಹೋಗುವದು, ಈ ವಾಯುಗಳೈದಕ್ಕೆ ವಿಶಿಷ್ಟಾದಿಗಳೇ ಕ್ರಮದಿಂದ ಅಧಿದೇವತೆಗಳು, ಪೃಥ್ವ್ಯಾದಿ ಪಂಚಮಹಾ ಭೂತಂಗಳಿಗೆ ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವರೆಂಬವರೇ ದೇವತೆಗಳು, ಈಪ್ರಕಾರದಲ್ಲಿ ಮಾಯಾ ಕಾರ್ಯಗಳಾದ ತತ್ವಗಳು ಆತ್ಮನಿಂದ ಚೈತನ್ಯ ಪಡೆದು ತಮ್ಮತಮ್ಮ ವ್ಯಾಪಾರಂಗಳಲ್ಲಿ ಪ್ರವರ್ತಿಪವಾದ ಕಾರಣ ಸಕಲ ವ್ಯಾಪಾರಿ ಕಾಲದಲ್ಲಿಯೂ ಆಯಾ ವ್ಯಾಪಾರಗಳ ಅನಾತ್ಮ ಧರ್ಮಗಳೆಂದು ತಿಳಿದು ತಾನು ಇವಕ್ಕೆ ಸಾಕ್ಷಿತನೆಂದು ಬೇರ್ಪಡಿಸಿ ನಿಶ್ಚೈಸಿ ನಿಲ್ಲುವದೇ ಸಾಕ್ಷಿತ್ವವು,

ದ್ವಿತೀಯೋಧ್ಯಾಯ ಸಂಪೂರ್ಣ.

ಮೂರನೇ ಅಧ್ಯಾಯವು*

ಅಷ್ಟಾಂಗಯೋಗ ನಿರ್ಣಯವು,

ಪಂಚೀಕರಣವ ಕೇಳಿದ ಶಿಷ್ಯನು ಗುರುಗಳಂಘ್ರಿಗೆ ನಮಿಸಿ ಭಯಭಕ್ತಿಯುಕ್ತನಾಗಿ ಸ್ವಾಮಿ,ನಿಮ್ಮ ಕಟಾಕ್ಷದಿಂದಅಜ್ಞಾನಾಂದಕಾರನಿವಾರಣವಾಗಿ ಆತ್ಮಾನಾತ್ಮವಿಭಾಗವು ತಿಳಿಯಲ್ಪಟ್ಟದ್ದಾಯಿತು, ಆತ್ಮಾನಾತ್ಮಗಳ ಬೇರ್ಪಡಿಸಿ ತನ್ನ ನಿಜಸ್ವರೂಪವಾದ ಆತ್ಮನ ಸಾಧಿಸಿಕೊಂಬುವದಕ್ಕೆ ಸಾಧನಗಳಂ ನಿರೂಪಿಸಬೇಕೆಂದು ಬಿನ್ನೈಸಲಾಗಿ ಶಿಷ್ಯನ ವಿವೇಕವಂ ಕಂಡು ಸಂತೋಷಪಟ್ಟು ಸಾಧನಗಳ ನಿರೂಪಿಸಿದರು ಆಸಾಧನಗಳು ಏನೆಂದರೆ, ನಿರೂಪಿಸೋವು, ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನಧಾರಣಾ, ಸಮಾಧಿಗಳೆಂದು ಎಂಟು ಪ್ರಕಾರವು, ಇವಕ್ಕೆ ವಿವರ ಅಹಿಂಸಾ ಸತ್ಯಮಾ ಸ್ತ್ರೀಯಬ್ರಹ್ಮಚರ್ಯಕ್ಷಮ ಧೃತಿ ದಯಾರ್ಜಿತ ಮಿತಾಹಾರಬಾಹ್ಯಾಭ್ಯಂತರ ಶೌಚವೆಂಬ ಹತ್ತು ಪ್ರಕಾರವು, ಇವಕ್ಕೆ ವಿವರ, ಅಹಿಂಸಾಯೆಂದರೆ ಆವ ಪ್ರಾಣಿಯನ್ನಾದರೂ ನೋಯಿಸದೆ ಸಂತೋಷ ಪಡಿಸುವದು, ಸತ್ಯವೆಂದರೆ ಕಂಡ

ತ್ಥ ರಹಿತನಾಗಿ ಇದ್ದು ಇತರಪ್ರಾಣಿಗಳಿಗೆ ಬಾಧಕವಾಗದ ಹಾಗೆ ನುಡಿ ವದು ಅಸ್ತೇಯವೆಂದರೆ ಪರರ ವಸ್ತುವು ತೃಣವನ್ನಾದರೂ ಚೌರ್ಯ ದಿಂದಾಗಲೀ ಬಲೋತ್ಕಾರದಿಂದಾಗಲೀ ಅಪಹರಿಸದೆ ಇರುವದು ಬ್ರಹ್ಮ ಚರ್ಯವೆಂದರೆ ಪರಸ್ತ್ರೀಯು ತಾನಾಗಿ ಬಂದು ಏಕಾಂತಸ್ಥಳದಲ್ಲಿ ತನ್ನಂ ಬಾಧಿಸಿದರೂ ಮಾತಲ ಸಹೋದರಿ ಬುದ್ಧಿಯುಳ್ಳ ಅವರ ವಶ್ಯಕನಾಗದ ಇರುವದು ಕ್ಷಮೆಯೆಂದರೆ ಪರರು ತನಗೆ ಅಪಕಾರವ ಮಾಡಿದರೂ ತಾನು ಮಾಡಿದ ಉಪಕಾರವ ಮರೆತು ಮರಳಿ ಕೇಡನೆಣಿಸಿದರೂ ಸೈರಿಸಿಕೊಂಡು ಪ್ರತಿಕಾರವಮಾಡದೆ ಇರುವದು ಧೃತಿಯೆಂದರೆ ಅರ್ಥ ಬಂಧು ಸುತಾದಿಗಳ ಪ್ರಾಪ್ತಿಯಲ್ಲಿ ಹಿಗ್ಗದೆ ಅವರ ಹಾನಿಯಲ್ಲಿ ತಗ್ಗದೆ ಇರುವದು ದಯೆಯೆಂ ದರೆ ತನ್ನ ಶತೃವಾಗಲೀ ಮಿತ್ರನಾಗಲೀ ಆರಾದರೂ ವ್ಯಾಧಿಗಳಿಂದ ಅನಾ ಥರಾಗಿದ್ದರೆ ಅವರ ರಕ್ಷಣ್ಯವ ಮಾಡಬೇಕೆಂದು ಮನಸ್ಸಿನಲ್ಲಿ ಮರುಗು ವದು ಆರ್ಜವವೆಂದರೆ ಹರುಷಶೋಕಗಳು ಕರ್ಮಾನುಸಾರವಾಗಿ ಬಂದರೂ ಆತ್ಮವ್ಯವಸಾಯದಲ್ಲಿ ವಕ್ರಗತಿ ಇಲ್ಲದೆ ಇರುವದು ಗುರುಹಿರಿಯರಲ್ಲಿ ಮಿ ತ್ರಬಾಂಧವರಲ್ಲಿ ಕಪಟವಿಲ್ಲದೆ ನಿಜವಾಗಿ ಇರುವದು ಮಿತಾಹಾರವೆಂದರೆ ಧ್ಯಾನಕ್ಕೆ ವಿರೋಧವಾಗದ ಹಾಗೆ ಅತ್ಯಂತಾಹಾರವನ್ನು ಮಾಡದೆ ಬಹು ಮಿತಿಯು ಮಾಡದೆ ರಾಜಸತಾಮಸಾಹಾರಂಗಳಂ ಬಿಟ್ಟು ಸಾತ್ವಿಕಾಹಾರಂ ಗಳಂ ವಹಿಸಿ ಹಿತಮಿತಮೇಧ್ಯಾಹಾರಗಳ ಸವಿವದು ಶೌಚವೆಂದರೆ ಮೃ ಜ್ಜಲಂಗಳಿಂದ ಬಾಹ್ಯಶುಚಿತ್ವವು ರಾಗದ್ವೇಷಗಳು ಮನಸನದಿಂದ ತೊಳೆವ ದು ಅಂತಃಶುಚಿತ್ವವು ಇವು ಹತ್ತು ಕೂಡಿ ಒಂದು ನಿಯಮವೆಂಬ ಸಾಧನವೆ ನಿಸುವದು ನಿಯಮವೆಂದರೆ ತಪ್ಪಸಂತೋಷ ಆಸ್ತಿಕ್ಯದಾನಮೀಶ್ವರ ಪೂ ಜನ ಸಿದ್ಧಾಂತ ಶ್ರವಣ ಲಜ್ಜಾಮತಿ ಜಪವ್ರತವೆಂದು ಹತ್ತು ಪ್ರಕಾರವು ಇ ವಕ್ಕೆ ವಿವರ ತಪಸ್ಸುಯೆಂದರೆ ಉಪವಾಸ ಪ್ರಾಯಶ್ಚಿತ್ತ ತೀರ್ಥಯಾತ್ರೆಗಳಿಂ ದ ದೇಹದಂಡನೆಯು ತಾನಾರು ತನಗೆ ಈ ಸಂಸಾರಯಲ್ಲಿ ಬಂತು ಇದು ಹ್ಯಾಗೆ ನಿವೃತ್ತಿಯಾಗುವದೆಂಬ ಆಲೋಚನೆಯೇ ತಪಸ್ಸೆನಿಸುವದು ಸಂ ತೋಷವೆಂದರೆ ಯದೃಚ್ಛೆಯಿಂದ ಬಂದ ಅನ್ನಾದಿಗಳಲ್ಲಿ ಸಂತುಷ್ಟನಾಗಿ ಇರುವದು ಆಸ್ತಿಕ್ಯವೆಂದರೆ ವೇದಶಾಸ್ತ್ರಗಳು ಪ್ರಮಾಣಗಳು ಪುಣ್ಯ ಪಾಪಂಗಳುಂಟು ಮತ್ತು ಪರಲೋಕ ಉಂಟು ಎಂಬ ವಿಶ್ವಾಸವು ದಾ ನವೆಂದರೆ ಸ್ವಯಾರ್ಜಿತವಾದ ಅನ್ನವಸ್ತ್ರ ಹಿರಣ್ಯಮೊದಲಾದ ದೇಶ ಕಾಲ ಪಾತ್ರದಲ್ಲಿ ಪ್ರುಪಕಾರವನು ಅಪೇಕ್ಷಿಸದೆ ತಮ್ಮ ತಮ್ಮ ಶಿಶುಗಳಕೈಲಿ ಫಲಾ

ದಿಗಳ ಕೊಡುವಂತೆ ಸಂತೋಷದಲ್ಲಿ ಕೊಡುವದು ಈಶ್ವರ ಪೂಜೆಯೆಂದ ರೆ ಸ್ತುತಿ ಸ್ಮರಣೆ ಪೂಜೆನಮಸ್ಕಾರಗಳಿಂದ ಮನೋವಾಕ್ಕಾಯ ಕರ್ಮ ಗಳಿಂದ ದೃಢವಾದ ಭಕ್ತಿಯುಕ್ತನಾಗಿ ಈಶ್ವರನ ಪೂಜಿಸುವದು ಸಿದ್ಧಾಂ ತ ಶ್ರವಣವೆಂದರೆ ವೇದಾರ್ಥಗಳ ವಿಚಾರಿಸುವದು ಲಜ್ಜೆಯೆಂದರೆ ವೈದಿ ಕ ಲೌಕಿಕ ಮಾರ್ಗಂಗಳಲ್ಲಿ ನಿಂದಿತವಾದ ಕರ್ಮಗಳಂ ಮಾಡುವದಲ್ಲಿ ಲಜ್ಜಿ ತ ನಾಗುವದು ಮತಿಯೆಂದರೆ ಅಹಿತವಾದ ಸ್ವಧರ್ಮದಲ್ಲಿ ಶ್ರದ್ಧೆಯು ಜ ಪವೆಂದರೆ ತನಗೆ ವುಪದೇಶವಾಗಿ ಬಂದ ಗಾಯಿತ್ರೀ ಷಡಾಕ್ಷರೀ ಅಷ್ಟಾಕ್ಷ ರೀ ಮೊದಲಾದ ಮಂತ್ರಗಳ ಅರ್ಥಾನು ಸಂಧಾನ ಪೂರ್ವಕವಾಗಿಆವರ್ತಿ ಯ ಮಾಡುವದು ವ್ರತವೆಂದರೆ ಧರ್ಮಾರ್ಥವಾಗಿಆತ್ಮ ಸಿದ್ಧ್ಯರ್ಥವಾಗಿ ದೋ ಷಗಳ ತೊಳೆವ ವುಪಾಯಭೂತವಾದ ಜಯಂತಿಯು ಮೊದಲಾದ ಪುಣ್ಯ ದಿವಸಗಳಂ ಅನುಸರಿಸುವದು ಇವು ಹತ್ತು ನಿಯಮವೆನಿಸುವದು.

ಆಸನವೆಂದರೆ ಸ್ವಸ್ತಿಕಾಸನಭದ್ರಾಸನ ಪದ್ಮಾಸನ ಸಿದ್ಧಾಸನ ಅರ್ಧ ಚಂದ್ರಾಸನ ಪರ್ಯಂಕಾಸನವೆಂದು ಆರುಪ್ರಕಾರವು ಇದರಲ್ಲಿ ಅನುಕೂ ಲವಾದಂಥಾ ಒಂದು ಬಗೆಯ ಆಸನವ ನಳವಡಿಸಿಕೊಂಡು ವಿಜನವಾದ ಶುದ್ಧ ಪ್ರದೇಶದಲ್ಲಿ ಕುಶಾಜಿನ ಹರಿಣ ಮೃದುವಾಗಿ ಹಾಸಿಕೊಂಡುಸ ಮಕಾಯ ಶಿರೋಗ್ರೀವನಾಗಿ ಕುಳಿತುಕೊಂಡು ನಾಸಿಕಾಗ್ರದಲ್ಲಿ ದೃಷ್ಟಿ ಯನಿಲ್ಲಿಸಿ ಅಂತರಂಗದಲ್ಲಿ ಸ್ವರೂಪಚಿಂತನೆಯ ಮಾಡುವದು ಆಸನವೆ ನಿಸಿಕೊಂಬುವದು ಪ್ರಾಣಾಯಾಮವೆಂದರೆ ರೇಚಕ ಪೂರಕ ಕುಂಭಕ ಪ್ರ ಕಾರದಲ್ಲಿ ವಾಯುವಂನಿರೋಧವ ಮಾಡುವದು ರೇಚಕವೆಂದರೆ ದಕ್ಷಿಣ ನಾಸಾಪುಟದಲ್ಲಿ ವಾಯುವ ಹೊರಯಂಕೆ ಬಿಡುವದು ಪುರಕವೆಂದರೆ ಆ ರಂಧ್ರವ ಮುಚ್ಚಿವಾಮನಾಸಾರಂಧ್ರದಲ್ಲಿ ವಾಯುವತುಂಬುವದುಕಂಭವೆಂ ದರೆ ಎರಡು ರಂಧ್ರವನ್ನು ಮುಚ್ಚಿ ವಾಯುವತಡವುದು ಪ್ರತ್ಯಾಹಾರ ವೆಂದರೆ ವಿಷಯಗಳ ಕುರಿತು ಹರಿದು ಹೋಗುವ ಯಿಂದ್ರಿಯ ಮನಸ್ಸು ಗಳಂ ಬಲವಂತದಲ್ಲಿ ಹಿಂದಕ್ಕೆ ತಿರಿಗಿಸಿ ಧ್ಯಾನದಲ್ಲಿ ನಿಲ್ಲಿಸುವದು ಧಾ ರಣವೆಂದರೆ ಶರೀರದಲ್ಲಿ ಇರುವ ಪಂಚಭೂತಂಗಳನ್ನು ಬಾಹ್ಯದಲ್ಲಿ ಇರುವ ಮಹಾ ಭೂತಂಗಳನ್ನು ಆಯಾಯಧಿದೇವತೆಗಳನ್ನು ಒಂದುಗೂ ಡಿಸುವದು ಆತ್ಮಧ್ಯಾನದಲ್ಲಿ ನಿಲ್ಲಿಸಿಹ ಮನಸ್ಸನ್ನು ಪ್ರಾಣವಾಯುಗ ಳನ್ನು ಸಡಿಲ ಬಡದಿಪ್ಪುದೇ ಧಾರಣವೆನಿಸುವದು ಧ್ಯಾನವೆಂದರೆ ಈ ರೀ

ತ್ರಿಯಲ್ಲಿ ತನುಮನಃ ಪ್ರಾಣಾದಿಗಳನೊಂದುಗೂಡಿಸಿ ಏಕಾಗ್ರಚಿತ್ತ
ದಲ್ಲಿ ಘಾಳಿಯಿಲ್ಲದ ಠಾವಿನ ದೀಪದಂತೆ ನಿಶ್ಚಲವಾಗಿ ಪರಮಾತ್ಮನ ಚಿಂ
ತಿಸುವದು ಸಮಾಧಿ ಯೆಂದರೆ ಸವಿಕಲ್ಪಕ ನಿರ್ವಿಕಲ್ಪಕವೆಂದು ಯೆರಡು
ಪ್ರಕಾರವು ಅದರಲ್ಲಿ ದೃಶ್ಯಾನುವಿಧ ಶಬ್ದಾನುವಿಧವೆಂದು ವಿಕಲ್ಪಕ
ಯೆರಡು ಪ್ರಕಾರವು ಅದು ಹ್ಯಾಗಂದರೆ ಕಾಮಾದಿಗಳ ದೃಶ್ಯವಾಗಿ ಕಂ
ಡು ಅವಕ್ಕೆ ಸಾಕ್ಷಿ ಭಾವವೇ ದೃಶ್ಯಾನುವಿಧವು ಅದು ಅಳಿಪಟ್ಟ ಸಾಕ್ಷಿ
ಯಾದಾತ್ಮನೆಂಬುದೇ ಶಬ್ದಾನುವಿಧವು ಎರಡು ಭಾವವು ಮರೆದು ಜೀ
ವಬ್ರಹ್ಮರೊಂದಾಗಿ ನಿಂದುದೇ ನಿರ್ವಿಕಲ್ಪ ಸಮಾಧಿಯೆನಿಸುವದು ಈ ರೀ
ತಿಯಲ್ಲಿ ಅಷ್ಟಾಂಗಯೋಗಾಭ್ಯಾಸದಿಂದ ಧ್ಯಾತೃ ಧ್ಯೇಯ ದಾನವೆಂ
ಬ ಭೇದವಳಿದು ಅಖಂಡಬ್ರಹ್ಮವೇ ತಾನಾಗಿ ನಿಲ್ಲುವನು ಇಂಥಾ ಬ್ರಹ್ಮ
ಕೈವಲ್ಯವ ಪಡೆದ ಯೋಗಿ ಯೆಂದಿಗೂ ಮರಳಿ ಜನಿಸನು ಯೆಂದು ಸಾ
ಧನಗಳಂ ನಿರೂಪಿಸಿದರು,

ತೃತೀಯೋಽಧ್ಯಾಯ ಸಂಪೂರ್ಣ

ಸಕಲ ಸಾಧನ ನಿರೂಪಣಾಭಿನ್ನಾಮವು.

ಗುರುಗಳು ಬಾರೈಯ್ಯಾ ಶಿಷ್ಯನೆ ಯೆಂದು ಕರೆದು ಸಾಧನಂಗಳ ನಿ
ರೂಪಿಸಿದರು ಅದು ಹ್ಯಾಗಂದರೆ-ಬ್ರಹ್ಮವ ತಿಳಿಯುವದಕ್ಕೆ ಜ್ಞಾನವೇ
ಮುಖ್ಯಸಾಧನವು ಈ ಜ್ಞಾನವು ಸತ್ಕರ್ಮಾನುಷ್ಠಾನದಿಂದ ಚಿತ್ತಶುದ್ಧಿ
ಚಿತ್ತಶುದ್ಧಿಯಿಂದ ಭಕ್ತಿಜ್ಞಾನ ಬರುವದು ಅಭ್ಯಾಸಕಾಲದಲ್ಲಿ ಆ ಸತ್ಕ
ರ್ಮ ತ್ಯಾಗವ ಮಾಡಿಯಾನು ಅವನು ಕರ್ಮ ಬ್ರಹ್ಮೋಭಯ ಭ್ರಷ್ಟನಾಗು
ವನು ಸತ್ಪುರುಷರು ಅವನಂ ದೂರದಿಂದಲೇ ತ್ಯಜಿಸಿ ಬಿಡುವರು ಗೀತೆ
ಯಲ್ಲಿ ಶ್ರೀಕೃಷ್ಣಸ್ವಾಮಿಯು ಅರ್ಜುನಗೆ ಯೇಳುನೂರುಶ್ಲೋಕಗಳಲ್ಲಿ
ಯೂ ಕರ್ಮವನ್ನೇ ಮಾಡಬೇಕೆಂದುನ್ನೂ ಮಾಡುವಲ್ಲಿ ಕರ್ತೃತ್ವಫಲಂ
ಗಳು ಬಿಟ್ಟು ಮಾಡಿದರೆ ಆ ಕರ್ಮ ನಿನಗೆ ಬಂಧಕವಾಗಲಾರದು ಉಂ
ದು ಮೊಳೆ ತೆಗದ ಬೀಜ ಹ್ಯಾಗೆ ಹುಟ್ಟಲಾರದೋ ಹಾಗೆಯೇ ಕಾಮ್ಯ
ರಹಿತವಾದ ಕರ್ಮವು ಜನ್ಮವ ಕೊಡಲಾರದು ಕರ್ಮವ ಮಾಡದೆ ಜ್ಞಾನ
ಬಾರದೇ ಯೆಂದರೆ ಪಾಕಪ್ರಯತ್ನವಿಲ್ಲದೆ ಅನ್ನ ಹ್ಯಾಗೆ ಭಾರದೋ
ಹಾಗೆಯೇ ಜ್ಞಾನಬಾರದು ಶರೀರ ಇಂದ್ರಿಯ ಪ್ರಾಣಾಂತಃಕರಣ ಆದಿ

ದೇವತೆಗಳೆಂಬ ಈ ಐದುಕರ್ಮಕ್ಕೆ ಹೇತುಗಳು ತಾನು ಸಾಕ್ಷಿ ಮಾತ್ರವೇ
ಒಂದು ವರ್ಣಾಶ್ರಮೋಚಿತವಾದ ಸತ್ಕರ್ಮಗಳ ಈಶ್ವರಾರ್ಪಿತವಾಗಿ ಮಾ
ಡೆ ನಿರ್ಲೇಪನಾಗಿ ಜೀವನ್ಮುಕ್ತನಹನು ಅಲ್ಲಿ ತದಾತ್ಮ್ಯತ್ರಯವಳಿದಲ್ಲದೆ
ಸಾಕ್ಷಿಯಾಗನು ತದಾತ್ಮ್ಯತ್ರಯವೇನೆಂದರೆ ಸಹಜ ತದಾತ್ಮ್ಯ ಕರ್ಮಜ
ನ್ಯ ತದಾತ್ಮ್ಯ ಭ್ರಾಂತಿಜನ್ಯ ತದಾತ್ಮ್ಯವೆಂದು ಮೂರು ಪ್ರಕಾರವು ಅಹಂ
ಕಾರಕ್ಕೆಚಿತ್ತನ ಪ್ರತಿಬಿಂಬದೊಡನೆಸಂಬಂಧವಾದಾಗ ಸಹಜ ತದಾತ್ಮ್ಯ
ವೆನಿಸುವದು ಅಹಂಕಾರವು ದೇಹದೊಡನೆ ಸಮ್ಮಂಧವಾಗದೆ ದೇಹ
ವೆಂಬದಾಗಿ ಕರ್ಮಜನ್ಯ ತದಾತ್ಮ್ಯವೆನಿಸುವದು ಆ ಅಹಂಕಾರವು ಸಾಕ್ಷಿ
ಯೊಡನೆ ಸಮ್ಮಂಧವಾದಲ್ಲಿ ಆತ್ಮೋಹನೆಂದು ಭ್ರಾಂತಿಜನ್ಯತದಾತ್ಮ್ಯ
ವೆನಿಸುವದು ಇವುಮೂರಕ್ಕೂ ಲಯವ್ಯಾವಾಗೆಂದರೆಸಹಜ ತದಾತ್ಮ್ಯ
ವು ಅಹಂಕಾರ ಹುಟ್ಟುವಾಗ ಕೂಡಿಬಂದಂತಾದ್ದರಿಂದ ಮೋಕ್ಷವಾದಾ
ಗಲೇ ಹೋಗುವದು ಕರ್ಮಲಯವಾದಾಗ ಕರ್ಮಜನ್ಯ ತದಾತ್ಮ್ಯ ಹೋ
ಗುವದು ಸಾಮ್ಯಜ್ಞಾನೋದಯವಾದಾಗ ಭ್ರಾಂತಿ ಜನ್ಯತದಾತ್ಮ್ಯ ಹೋ
ಗುವದು ಇದು ಹೋಗಲಾದುವದಕ್ಕೆ ಶ್ರವಣ ಮನನ ನಿಧಿ ಧ್ಯಾನಗಳೇ
ಮುಖ್ಯ ಸಾಧನವು ಶ್ರವಣವೆಂದರೆ ಮಹಾ ವಾಕ್ಯಗಳಿಂದ ಅದರ ಅ
ರ್ಥಾನು ಸಂಧಾನವೇ ಶ್ರವಣವೆನಿಸುವದು ಅದೇ ಅರ್ಥವನ್ನೇಯುಕ್ತಿಯಿಂ
ದ ಅನುಸಂಧಾನವಂ ಮಾಡುವದೇ ಮನನವೆನಿಸುವದು ಈ ಯರಡರಿಂದ
ನಿಸ್ಸಂದೇಹನಾಗಿ ಚಿತ್ತದಲ್ಲಿ ನಿಂತ ಯೇಕತ್ವಜ್ಞಾನವೇ ನಿಧಿಧ್ಯಾಸನವೆ
ನಿಸುವದು ಈ ನಿಶ್ಚಯದ ಮೇಲೆ ಘಾಳಿಯಿಲ್ಲದ ರಾವಿನದೀಪದಂತೆ ಧ್ಯಾ
ನ ನಿಶ್ಚಲವಾಗಿ ನಿಂತದ್ದು ನಿರ್ವಿಕಲ್ಪ ಸಮಾಧಿಯನಿಸುವದು ಸಮಾಧಿ ಸ
ವಿಕಲ್ಪಕ ನಿರ್ವಿಕಲ್ಪಕವೆಂದು ಯರಡು ಪ್ರಕಾರವು ಸವಿಕಲ್ಪಕನೆಂಬು
ವದು ದೃಶ್ಯಾನುವಿಧ ಶಬ್ದಾನು ವಿಧವೆಂದು ಯರಡುಪ್ರಕಾರವು ಅದು
ಹ್ಯಾಗೆಂಧರೆ ಅಂತಃಕರಣ ಕಪರ್ಣವಾದ ಕಾಮಾದಿಗಳ ದೃಶ್ಯವಾಗೆ
ಕಂಡು ಅವಕ್ಕೆ ತಾನು ಸಾಕ್ಷಿಯಾಗಿತನ್ನನ್ನೆ ಧ್ಯಾನಿಸುವದೇ ದೃಶ್ಯಾನು
ವಿಧವೆನಿಸುವದು ಇದು ಅಳವಟ್ಟು ತಾನು ಅಸಂಗನುಸಚ್ಚಿದಾನಂದ ಸ್ವ
ರೂಪನು ಸ್ವಪ್ರಕಾಶನು ಅದ್ವೈತ ಬ್ರಹ್ಮವೆಂದು ಧ್ಯಾನಿಸುವದೇಶಬ್ದಾ
ನು ವಿಧವು. ಇದು ಇಳವಟ್ಟಮೇಲೆ, (ಆನಂದಾನು——
ಭವದಿಂದ ಯರಡನ್ನು ಮರತು ಯೇಕರಸವಾಗುವದೇನಿರ್ವಿಕಲ್ಪ ಸ

ಮಾಧಿ ಯೆನಿಸುವದು. ಈ ಬಗೆ ಧ್ಯಾನದಲ್ಲಿ ಲಯ, ವಿಕ್ಷೇಪ, ಕಷಾಯ, ಅಂತರಾಯ, ರಸ ಸ್ವಾದನಗಳೆಂಬ ವಿಘ್ನಗಳುಂಟು. ಇವಕ್ಕೆ ಪರಿಹಾರವೇನೆಂದರೆ, ಧ್ಯಾನ ಕಾಲದಲ್ಲಿ ನಿದ್ರೆ ಬಂದರೆ, ಯಚ್ಚತ್ತು ಅದ್ಯಂತವು ಬ್ರಹ್ಮವೊಂದು ತಿಳಿಯುವದೇ ಲಯಕ್ಕೆ ಪರಿಹಾರ, ಧ್ಯಾನ ಕಾಲದಲ್ಲಿ ಚಿತ್ತವೃತ್ತಿ ವಿಷಯದಲ್ಲಿ ಬೀಳಲು ಹಿಂದಿರಗಿಸುವದೇ ವಿಕ್ಷೇಪ ಪರಿಹಾರ, ಸಮಕ್ಕೆ ನಿಂತ ಚಿತ್ತವೃತ್ತಿ ಚಲಿಸಿದರೆ ನಿಶ್ಚಲವಾಗಿ ನಿಲ್ಲಿಸುವದೇ ಕಷಾಯ ಪರಿಹಾರ, ಅನುಭಾನುಭವದಲ್ಲಿ ಸವಿಕಲ್ಪಾನಂದಕ್ಕೆ ಬಂದರೆ, ರಸಾಸ್ವಾದವೆನಿಸುವದು. ಅದು ನಿರ್ವಿಕಲ್ಪದಲ್ಲಿ ನಿಲ್ಲಿಸಿದರೆ, ರಸಾ ಸ್ವಾದ ಪರಿಹಾರ ಇಂತು ನಾಲ್ಕು ಬಗೆ ವಿಘ್ನಗಳ ತಿಳಿದು ಅವಕ್ಕೆ ತಕ್ಕ ಪರಿಹಾರಗಳಂ ಮಾಡಬೇಕು, ಈ ರೀತಿಯಲ್ಲಿ ಅಭ್ಯಾಸದಿಂದ ಆರೂಢನಾಗಿ ಅನಂತರದಲ್ಲಿ ಸಮರಸವಾದ ತನ್ನ ದೇಹವದೆ ಇಲ್ಲವೆಂಬುದ ತಿಳಿಯದೆ ಬಹಿರಂಗವ ಮರತವನಿಗೆ ನಿದ್ರೆಗೈವನೋಪಾದಿಯಲ್ಲಿ ಕರ್ಮತಾನೇ ಲಯವಾಗುವದು, ಆಗ ಅವನಿಗೆ ವಿಧಿ ನಿಷೇಧವಿಲ್ಲವೆಂದು ಶಾಸ್ತ್ರ ಹೇಳುತ್ತಾ ಇದ್ದೀತಾಗಿ ಆರುರುಕ್ಷುವಾದವನು ಸರ್ವಾತ್ಮನಾ ಕರ್ಮವಂ ಬಿಡಕೂಡದು, ಕರ್ಮವ ಮಾಡುತ್ತಾ ಸಕಲ ಸಾಧನಗಳನ್ನು ಅಳವಡಿಸಿಕೊಂಡು ನಿಯಮದಲ್ಲಿ ಈಶ್ವರ ಭಕ್ತಿಯಿಂದ ಭಜಿಸಿದರೆ, ಅನಾಯಾಸದಲ್ಲಿ ಸಂಸಾರವ ದಾಂಟಿ ಜೀವನ್ಮುಕ್ತನೆನಿಸಿಕೊಂಡು ತದನಂತರ ವಿದೇಹ ಮುಕ್ತನೆನಿಸಿ, ಪುನರಾವರ್ತಿ ರಹಿತನಾಗುವನು, ಸರ್ವವ್ಯಾಪಾರಕಾಲೇಪಿ ಪ್ರಜ್ಞಾನಂ ಬ್ರಹ್ಮೇತಿ ನಾಹಂ ಕರ್ತಾ ನಾಹಂಭೋಕ್ತಾ ಕಿಂತು ಕೇವಲಾಖಂಡ ರೂಪೋಸ್ಮಿತಿವಿಲಕ್ಷಣ ಸಾಕ್ಷಿತ್ವೇನಸ್ಥಾತವ್ಯಂ ॥ ತ್ರಿಪುದಾಮುಸುಯದ್ಭೋಜ್ಯಂಇತ್ಯಾದಿವ್ರಯೂತಿಶುದ್ಧಂಪರಮಾತ್ಮರೂಪಂ ॥ ಸತ್ಯಮಿತ್ಯುಪನಿಷತ್ ॥ ಹಂಸತತ್ವಾನು ವಿವರಣೆಯಂ ಪೇಳುವ. ಕೇಳೈಯ್ಯಾ ಶಿಷ್ಯನೇ ಯೆಂದು, ಪ್ರಾಣಾಪಾನ ವಾಯುಗಳು, ಈಡಾ ಪಿಂಗಳ ನಾಡಿ ಸಂಬ್ರಂಧಗಳಾಗಿ, ಉಶ್ವಾಸ ನಿಶ್ವಾಸ ರೂಪವಾಗಿ ಸಂಚರಿಸುವದು ಅದರಲ್ಲಿ ಹೃದಯಸ್ಥವಾದ ಪ್ರಾಣವಾಯುವು ಈಡಾನಾಡಿಯ ಕೂಡಿ, ಉಶ್ವಾಸ ರೂಪವಾಗಿ ಹಕಾರಾಕ್ಷರವಾಗಿ ಬಹಿರ್ಗತವಾಗುವದು ಇದು ಬಹಿರ್ರೇಚಕವೆಂಬುವರು ದ್ವಾದಶಾಂಗುಳದಲ್ಲಿ ಬಂದು ಗತವಾಗಿ ಕ್ಷಣ ನಿಲ್ಲುವದು ಬಹಿಃ ಕುಂಭಕವೆಂಬುವರು, ಗುದಸ್ಥವಾದ ಅಪಾನವಾಯು, ಪಿಂಗಳ ನಾಡಿಯಾ ಕೂಡಿ, ನಿಶ್ವಾಸರೂಪ

ದಿಂದ ಸಕಾರಾಕ್ಷರವಾಗಿ ಅಂತಃಪ್ರವೇಶವಾಗುವದು, ಅದು ಪೂರಕವೆಂಬ ವರು, ಇದೇ ಹಂಸರೂಪಕದಿಂದ ಸಕಾರಾಕ್ಷರವಾಗಿ ಜೀವ ಸ್ವರೂಪದಿಂದ ದಿನ ೧ಕ್ಕೆ ೨೧,೬೦೦ ಅಜಪಾನುಷ್ಠಾನವಾಗುವದು, ಇದರ ಮೂಲ ತಿಳಿದ ಯೋಗಿಗಳು ಉಷಃಕಾಲದಲ್ಲಿ ಅಜಪಾ ಸಮರ್ಪಣೆಯು ಮಾಡುವರೀತಿ (ಶ್ರೀವತ್ಸ ಇತ್ಯಾತಿ ಪೂರ್ವೇದ್ಯುಃ ಇತ್ಯಾದಿ ಅಜಪಾಜಪಂಕರಿಷ್ಯೆ)

೪, ಶರೀರ ಮಧ್ಯದಲ್ಲಿ ಮೂಲಾಧಾರ ಚಕ್ರ ಚತುರ್ದಳ ಅರುಣ ವರ್ಣನಾಗಿ, ವ, ಶ, ಷ ಸ, ಯೆಂಬ ಬೀಜ ಯುಕ್ತವಾಗಿ ಇರುವದು ತನ್ಮಧ್ಯದಲ್ಲಿ ಆದಿಶಕ್ತಿ ಸಮೇತನಾಗಿ ಇರುವ ಗಣೇಶ ದೇವರಿಗೆ ೬೦೦ ಹಂಸಮಂತ್ರ ಸಮರ್ಪಣೆ.

... ... *

೬, ತದುಪರಿ ಚತುರಂಗುಳ ಪ್ರಮಾಣದಲ್ಲಿ ಷಡ್ದಳ ಯುಕ್ತವಾಗಿ ಸ್ವಾಧಿಷ್ಠಾನ ಚಕ್ರ ಅರುಣದಳ ಪೀತವರ್ಣ, ಬ, ಭ, ಮ, ಯ, ರ, ಲ, ಯೆಂಬ ಆರು ಬೀಜಯುಕ್ತವಾಗಿರುವದು, ತನ್ಮಧ್ಯದಲ್ಲಿ ಸರಸ್ವತಿ ಸಮೇತನಾಗಿರುವ ಚತುರ್ಮುಖ ಬ್ರಹ್ಮದೇವರಿಗೆ ೬,೦೦೦ ಹಂಸ ಮಂತ್ರ ಅರ್ಪಿಸುವದು.

... ... *

೧೦, ನಾಭಿಸ್ಥಾನದಲ್ಲಿ ಮಣಿಪೂರಕ ಚಕ್ರ ದಶದಳಯುಕ್ತವಾಗಿ ಡ, ಢ, ಣ ತ, ಥ, ದ, ಧ, ನ, ಪ. ಫ, ಎಂಬ ಹತ್ತು ಬೀಜಯುಕ್ತವಾಗಿ ಇರುವದು ತನ್ಮಧ್ಯ ಲಕ್ಷ್ಮೀಸಮೇತನಾಗಿರುವ ವಿಷ್ಣುವಿಗೆ ೬,೦೦೦ ಹಂಸ ಮಂತ್ರ ಸಮರ್ಪಿಸುವದು.

... *

೧೨, ತದ ಪರಿ ಹೃದಯಸ್ಥಾನದಲ್ಲಿ ಅನಾಹತ ಚಕ್ರ ದ್ವಾದಶ ದಳೋಪೇತವಾಗಿ, ಕ ಖ ಗ ಘ ಙ, ಚ ಛ ಜ ಝ ಞ, ಟ ಠ ಯೆಂಬ ಹನ್ನೆರಡು ಬೀಜ ಯುಕ್ತವಾಗಿರುವದು ತನ್ಮಧ್ಯದಲ್ಲಿ ಗೌರೀ ಸಮೇತನಾಗಿರುವ ಈಶ್ವರನಿಗೆ ೬,೦೦೦ ಹಂಸ ಮಂತ್ರ ಅರ್ಪಿಸುವದು.

...

೧೬, ಕಂಠಸ್ಥಾನದಲ್ಲಿ ವಿಶುದ್ಧ ಚಕ್ರ ಅಕಾರಾದಿ ಷೋಡಶ ಸ್ವರ ಬೀಜಯುಕ್ತವಾಗಿರುವ ತನ್ಮಧ್ಯದಲ್ಲಿರುವ ಜೀವನಿಗೆ ೧೦೦೦ ಹಂಸ ಮಂತ್ರ ಸಮರ್ಪಿಸುವದು.

... *

೨ ತದುಪರಿ ಆಜ್ಞಾ ಚಕ್ರ ಭ್ರೂಮಧ್ಯದಲ್ಲಿ ದ್ವಿದಳ ಕಮಲದಲ್ಲಿ ಹಂ, ಕ್ಷಂ, ಯೆಂಬ ಯೆರಡು ಬೀಜ ಯುಕ್ತವಾದ ಕಮಲದಲ್ಲಿ ಇರುವ ಪರಮಾತ್ಮನಿಗೆ ೧೦೦೦ ಹಂಸಮಂತ್ರ ಸಮರ್ಪಿಸುವದು, ಅಂತು ೫೦ ಅಕ್ಷರಗಳು,

... ... *

ತದುಪರಿ ಬ್ರಹ್ಮರಂಧ್ರಸ್ಥಾನದಲ್ಲಿ ಸಹಸ್ರದಳೋಪೇತವಾಗಿ ಅಕಾರಾದಿ ಕ್ಷಕಾರಾಂತ್ಯವ ಪರಿಯಂತರ, ಪಂಚಾಶದ್ವರ್ಣ ಅನುಲೋಮ ವಿಲೋಮ ದಶಕಧಿಂದ ಯುಕ್ತವಾಗಿ ಸಹಸ್ರಾರ ಕಮಲವಿರುವದು, ತನ್ಮಧ್ಯೆ ಆನಂದಶಕ್ತಿ ಯುಕ್ತನಾಗಿರುವ ಶ್ರೀಗುರುವಿಗೆ ೧೦೦೦ ಹಂಸಮಂತ್ರ ಸಮರ್ಪಿಸುವದು ಅಂತು ೨೧.೬೦೦೦.

ಈ ಪ್ರಕಾರ ಹಂಸಮಂತ್ರಾನುಷ್ಠಾನದಲ್ಲಿ, ನಾದ ಬಿಂದು ಕಳಾ ಅನುಭವನಿಂದ ಪ್ರತಿದಿವಸವು ಸಂಚರಿಸುವ ಯೋಗಿ ಮಾನಸ ಸೂರ್ಯ ಚಕ್ರ ಅಷ್ಟದಳ ಹೃದಯ ಕಮಲದಲ್ಲಿ ಅಭ್ಯಾಸ ಕಾಲವಾಗಿ ಅದರಲ್ಲಿ ಮನಸ್ಸು ಅಷ್ಟದಳಗಳಂ ಮೆಟ್ಟಿ ಇಂದ್ರಿಯಗಳೊಡಗೂಡಿ, ಬಹಿರ್ಮುಖವಾಗುವದು. ಅದು ಹ್ಯಾಗಂದರೆ, ಹೃದಯ ಕಮಲದಲ್ಲಿ ಅಷ್ಟದಳವಿರುವದು ಅದರಲ್ಲಿ ಪೂರ್ವ ದಳಕ್ಕೆ ಬಂದರೆ ಪುಣ್ಯವಾದ ಮನಸ್ಸಾಗುವದು, ಆಗ್ನೇಯದಳಕ್ಕೆ ಬಂದರೆ ನಿದ್ರಾಲಸ್ಯಹುಟ್ಟುವದು, ದಕ್ಷಿಣದಳಕ್ಕೆ ಬಂದರೆ ಕ್ರೂರಬುದ್ಧಿಯಾಗುವದು, ನೈರುತ್ಯದಳಕ್ಕೆ ಬಂದರೆ ಪಾಪಬುದ್ಧಿ ವರುಣದಳದಲ್ಲಿ ಕ್ರೀಡಾಬುದ್ಧಿ, ವಾಯುವ್ಯ ದಳದಲ್ಲಿ ಗಮನಬುದ್ಧಿ, ಕುಬೇರ ದಳದಲ್ಲಿ ರತಿಬುದ್ಧಿ, ಈಶಾನ್ಯದಳದಲ್ಲಿ ದ್ರವ್ಯಸಂಗ್ರಹಬುದ್ಧಿ, ಮಲಕಮಧ್ಯದಲ್ಲಿ ವೈರಾಗ್ಯ ಬುದ್ಧಿ, ಕೇಸರದಲ್ಲಿ ಜಾಗ್ರದಾವಸ್ಥೆ, ಕರ್ಣಿಕೆಯಲ್ಲಿ ಸ್ವಪ್ನವು, ಲಿಂಗದಲ್ಲಿ ಸುಷುಪ್ತಿಯು, ಪದ್ಮತ್ಯಾಗದಲ್ಲಿ ತುರ್ಯವು, ಈರೀತಿಯಾಗಿ ಮನಗತಿ ಭೇದದಿಂದ ಜೀವನು ಪ್ರವರ್ತಿಸುವನು, ಯೋಗಿಯಾಗ ನಾದಾಂತದಲ್ಲಿ ಮನೋವಾಯು ಯುಕ್ತವಾಗಿ, ನಾದಬಿಂದು ಕಳೈಕ್ಯವಾಗಿ, ಕರ್ಪೂರಕ್ಕೆ ದೀಪ ಹಚ್ಚಿದರೆ ಏಕವಾದ ಉರಿ ಹ್ಯಾಗೆಯೋ, ಹ್ಯಾಗೆ ಜ್ಯೋತಿ ಸರೂಪವಾಗಿ ನಿಶ್ಶೇಷಿಸುವದೋ, ಆ ರೀತಿಯಿಂದ ದೇಹಾತ್ಮ ಜ್ಞಾನಹೋಗಿ, ಹಂಸ ಪರಮಹಂಸನಾಗಿ ತದ್ಭಾವವುಮರತು, ಉನ್ಮನಿ ಭಾವವಾದ ಮಹಾನುಭವ ಅನುಭವಮನೋವಾಗ್ಗೋಚರವಾದಾಗ್ಯೂ ಶಿಷ್ಯಬೋಧನಕಾಲಾಪೇಕ್ಷೆಯಿಂ ನಿರೂಪಿಸಿದಸ್ವಾನುಭವಪ್ರಕಾರಇದು ಭಾವನಾಪರನಾಗಿ ಭಾವಿಸುವರು, ಈಪ್ರಕಾರ ಭಾವನೆಯಿಂದಲೇ ಜೀವನ್ಮುಕ್ತರೆನಿಸಿಕೊಂಬುವರು, ನಾಯಂ ಲೋಕೋಸ್ತಿ ಇತ್ಯಾದಿ ನಿಬಧ್ನಂತಿಧನಂಜಯಃ॥ ಯದ್ಗತ್ವಾನನಿವರ್ತಂತೆ ತದ್ಧಾಮ ಪರಮಂಮಮ ಯಂಬಭಗವದ್ವಚನದಿಂದಲೂ ಅನೇಕ ಶೃತಿಸ್ಮೃತಿ ಪ್ರಸಿದ್ಧವಾದ ಸ್ವಾನುಭವ ಸಿದ್ಧಾಂತವಾದ ಸ್ವಾಂಶಿತಾರಕಾಮನಸ್ಕ ವಿಭಾಗವನ್ನು ಭ್ರಮರಕೀಟನ್ಯಾಯದಿಂದ ಶಿಷ್ಯಗುರು

ಸ್ವರೂಪವಾಗಿ ಜನನ ಮರಣಾದಿಗಳ ಸಮ್ಬಂಧವಿಲ್ಲದೆ ಪರಶಿವ ಸ್ವರೂಪ ಅಖಂಡೈಕ ರಸಭಾವಾನುಭವ ತಿದ್ಧಾ ಈ ಅನುಭವ ಸನಕಾದಿಯೋಗಿಗಳ ಬ್ರಹ್ಮಾದಿ ದೇವತೆಗಳು ದತ್ತಾತ್ರೇಯಾದಿ ಯೋಗಿಗಳು ಪರಂಪರಯಾ ಶಿಷ್ಯ ಪುದ್ಧಾರಾರ್ಥವಾಗಿ ಸತ್ಸಂಪ್ರಾಯದಲ್ಲಿ ವುಪದೇಶ ಕ್ರಮವು ಸ್ವಾನುಭವ ಕ್ರಮವು ನಿಮಿಷಾರ್ಧಂ ನತಿಷ್ಟಂತಿ ವೃತಿಂ ಬ್ರಹ್ಮಮಯೀಂವಿನಾಯಥಾತಿಷ್ಟಂತಿ ಬ್ರಹ್ಮಾದ್ಯಾಸ್ಸನಕಾದ್ಯಾಶ್ಶುಕಾದಯಃ ಅನೇಕ ಜನ್ಮ ಪರಿಪಕ್ವವಾದಂತಾ ಜೀವನು ಶ್ರೀಗುರುಚರಣ ಕಟಾಕ್ಷದಿಂದ ಸಾಧಿಸಿಕೊಂಡು ಸಿದ್ಧನಾದನೆಂದು ಹೇಳಿ ಮತ್ತೂ ಯಲ್ಲಾ ವಿಷಯಗಳಿಗೂ ಗುಣಗಳೇ ಕಾರಣವು, ಗುಣಗಳಿಗೆ ಪಕೃತಿಕಾರಣ, ಆ ಪ್ರಕೃತಿಯು ಆವರಣ ವಿಕ್ಷೇಪವೆಂದು ಯರಡು ಶಕ್ತಿಯಾಗಿ, ಆವರಣ ಶಕ್ತಿಯು ವಸ್ತುವ ಕಾಣದಹಾಗೆ ಆವರಿಸಿಕೊಂಡಿಹುದು, ವಿಕ್ಷೇಪಶಕ್ತಿಯು, ಜೀವಕೋಟಿಗಳಂ ಸೃಜಿಸುವದು. ಇದೆ, ಅಷ್ಟಪುರಿ ಯನಿಸುವದು, ಜ್ಞಾನೇಂದ್ರಿಯ ಕರ್ಮೇಂದ್ರಿಯ, ಪ್ರಾಣ, ಮನಸ್ಸು ಮಹಾಭೂತ, ಕಾಮ, ಕರ್ಮ, ತಪಸ್ಸು, ಯೆಂದು ಇವೆ ಅಷ್ಟಪುರಿಗಳು, ಅವಿದ್ಯೆಯೇ, ಕಾರ್ಯ ಕಾರಣಾತ್ಮಕದಿಂದ ಜಗದಾಕಾರವಾಯಿತಾಗಿ, ಜಗತ್ತಿನಲ್ಲಿ ಸ್ವಗತ ಸಜಾತೀಯ ವಿಜಾತೀಯವೆಂದು ಮೂರುಭೇದಗಳುಂಟು. ಅದು ಹ್ಯಾಗೆಯೆಂದರೆ, ವೃಕ್ಷದಲ್ಲಿ ಪತ್ರಪುಷ್ಪಫಲಗಳು ಸ್ವಗತವೆನಿಸುವದು, ವೃಕ್ಷದಹಕ್ಕೆ ಶಿಲೆಮೊದಲಾದ್ದು ವಿಜಾತಿಯೆನಿಸುವದು, ಈದೋಷತ್ರಯವು ಬ್ರಹ್ಮದಲ್ಲಿ ವುಂಟೆ ಅಂದರೆ, ಇಲ್ಲಾ, ಅದು ಹ್ಯಾಗೆಯೆಂದರೆ, ಬ್ರಹ್ಮದಲ್ಲಿ ಒಂದು ಪದಾರ್ಥವು ಹುಟ್ಟಲಿಲ್ಲವಾಗಿ ಸ್ವಗತ ಭೇದವಿಲ್ಲ, ಬ್ರಹ್ಮದಹಾಗೆ ಮತ್ತೊಂದು ಬ್ರಹ್ಮವಿಲ್ಲವಾಗಿ ಸಜಾತೀಯ್ಯಭೇದವು ಇಲ್ಲ, ಬ್ರಹ್ಮದಿಂದನ್ಯವಾದ ವಸ್ತುವು ಮದೂ ಇಲ್ಲವಾಗಿ ವಿಜಾತೀಯ ಬೇದವು ಇಲ್ಲ. ಈ ರೀತಿಯಲ್ಲಿ ವಿಚಾರಿಸಿ ಸ್ಥೂಲ ದೇಹಧರ್ಮಗಳನ್ನು ಳಿದು ಕುಲಬಲದನಾಕಾರ ಯವ್ವನಸುದತಿ ಸಂಪತ್ತು ವಿದ್ಯೆಗಳೆಂಬ ಅಷ್ಟಮದಗಳಂ ಕಳಿದು ಘೃಣಾಲಜ್ಜಾಭಯಾಶಂಕಾ ಜಗುಪ್ಸಾಕುಲಶೀಲ ಆಚಾರಗಳೆಂಬ ಅಷ್ಟಪಾಶಪಹರಿಮ ಅವಿದ್ಯೆ ಅಸ್ಮಿತ ರಾಗದ್ವೇಷ ಅಭಿನಿವೇಶಗಳೆಂಬ ಪಂಚಕ್ಲೇಶಗಳಂ ಕಳಿದು, ಆಶಾಚಿಂತಾ ಶಂಕಾ ಸಂಕಲ್ಪಗಳೆಂಬ ಮಲಚತುಷ್ಟಯಗಳಂ ಹೊಂದದೆ ಭೂತಪ್ರತಿಬಂದ ವರ್ತಮಾನ ಪ್ರತಿಬಂಧ, ಬಾವಿ ಪ್ರತಿಬಂಧವೆಂದು ಪ್ರತಿಬಂಧತ್ರಯಗಳ ತಿಳಿ

ದು ಜ್ಞಾತೃ ಜ್ಞಾನಜ್ಞೇಯ ಯಂತಲೂ, ಭೋಕ್ತೃ ಭೋಗವೆಂತ
ಲೂ, ಕರ್ತೃ ಕಾರಣ ಕರ್ಮವೆಂತಲೂ ಈ ನವವಿಧ ಸಾಸ್ಕಾರಂಗಳಂ ತಿಳಿ
ದು ಸರ್ವ ಸಂಶಯ ನಿವೃತ್ತ ಕನಾಗಿ ತನ್ನ ಅಧಿಕಾರವರಿತು ಸಗುಣ ನಿರ್ಗು
ಣೋಪಾಸಕನಾಗಿ ಇದ್ದರೆ ಈತನು ಕಾರ್ಯಕಾರಣಗಳ ಚನ್ನಾಗಿ ತಿಳಿದು
ನಿಧಾನಕ್ಕೆ ನಿಂತ ಜ್ಞಾನವುಳ್ಳವನಾಗಿ ಮುಖ್ಯಾಧಿಕಾರಿ ಯನಿಸಿಕೊಂಬನು
ಇಂಥಾ ನಿಧಾನಿ ಸಂಸಾರದಲ್ಲಿ ಇದ್ದರೂ ಜೀವನ್ಮುಕ್ತ ನೆನಿಸಿಕೊಂಬನು
ಪ್ರತಿ ಬಂಧತ್ರಯಂಗಳ ವಿವರವೇನು ಆದರೆ ಹೇಳೇವು ಸಂಸಾರಿಯಾಗಿ
ಪಶು ಮೊದಲಾದ ವಂದಾನೊಂದು ವಸ್ತುವ ಅತಿಮಮತೆಯಿಂದ ಸಾಕಿ
ದರೆ ಆದು ಧ್ಯಾನ ಕಾಲಕ್ಕೂ ತಾನೇ ಬಂದು ನಿಲ್ಲುವದಾದರೆ ಇದು ಭೂತ
ಪ್ರತಿಬಂಧವೆನಿಸುವದು ಇದನ್ನು ತನ್ನ ವಿವೇಕ ಬಲದಿಂದ ನಿವಾರಿಸಲು
ಹೋಗದೇ ಇದ್ದರೆ ಅದು ಚನ್ನಾಗಿ ಧ್ಯಾನಕ್ಕೆ ಇರಿಸಿಕೊಂಡು ಅದರಲ್ಲಿ
ಇರುವ ನಾಮರೂಪಗಳ ಬಿಟ್ಟು ಅಸ್ತಿ ಭಾತಿ ಪ್ರಿಯಗಳ ಸಾಧಿಸಿದರೆ ಅ
ದಕ್ಕೆ ಪರಿಹಾರವೆನಿಸುವದು ವರ್ತಮಾನ ಪ್ರತಿ ಬಂಧವೇನಂದರೆ ವಿಷಯಾ
ಸಕ್ತಿ ಲಕ್ಷಣ ಪ್ರಾಜ್ಞ ಮಾಂದ್ಯ ಕುತರ್ಕ ವಿಪರ್ಯಯ ದುರಾಗ್ರಹವೆಂದು
ನಾಲ್ಕು ತೆರನಾಗಿರುವದು ಅದು ಹ್ಯಾಗಂದರೆ ಒಂದು ವಿಷಯದಲ್ಲಿ ಆ
ರೂಢವಾದ ಆ ಸಕ್ತಿಯೇ ವಿಷಯಾ ಶಕ್ತಿ ಯೆನಿಸುವದು ಹೇಳಿದಂಥಾ ಅ
ರ್ಥವು ಬುದ್ಧಿಗೆ ಹತ್ತದೆ ಇದ್ದರೆ ಪ್ರಜ್ಞಾ ಮಾಂದ್ಯವೆನಿಸುವದು ಗುರುಗಳು ಹೇ
ಳಿದಂಥಾ ಅರ್ಥಕ್ಕೆ ವಿಪರೀತಾರ್ಥವು ಹೇಳುವದೇ ಕುತರ್ಕವೆನಿಸುವದು ನಾ
ನು ಬಲ್ಲವನು ನಾನೇ ಯೋಗ್ಯನು ಮಹಾ ವಿರಕ್ತನು ಜ್ಞಾನಿಯು ಯಂ
ದು ಅಹಂಕರಿಸುವದೇ ವಿಪರ್ಯಯ ದುರಾಗ್ರಹ ವೆನಿಸುವದು ಈ ಬಗೆ ಸಾ
ಮರ್ಥ್ಯ ತನ್ನಲ್ಲಿ ಇದ್ದರೆ ಇಂಥಾಗುಣಗಳಂ ಹೇಳಿಕೊಂಡರೆ ದೋಷವೇ
ನು ಯೆಂದರೆ ಹೇಳೇವು ನಾನು ಯನ್ನುವಾಗ ದೇಹಾಭಿಮಾನ ಗೂಡಿಯೇ
ಬರುವದಾಗಿ ಮುಕ್ತನಾದವನಾದರೂ ಪುನಃ ತನ್ನಿಂದ ತಾನೇ ಬದ್ಧದಾಗು
ವನು ಸಾಕ್ಷಿಯಾದ ಆತ್ಮನಿಗೆ ಅಭಿಮಾನವಿಲ್ಲವಾಗಿ ಹೀಗೆ ನಾನು ಯಂ
ಬುದೆ ಅಜ್ಞಾನದ ಬೇರು ಯೆನಿಸುವದು ಹೀಗೆಂದರೆ ತನಗೆ ಬಾಧಕವಾಗು
ವದೆಂದು ಯೆಚ್ಚತ್ತು ವಂದು ವೇಳೆಯು ಮೋಸ ಹೋಗದವನೇ ಘನವಿ
ವೇಕಿ ಯೆನಿಸಿಕೊಂಬುವನು ಇವು ನಾಲ್ಕು ವರ್ತಮಾನ ಪ್ರತಿಬಂಧವೆನಿಸುವ
ದು ಇದಕ್ಕೆ ಪರಿಹಾರ ಹ್ಯಾಗಂದರೆ ಶಮಾದಿ ಷಟ್ಕದಿಂದ ವಿಷಯಾಶಕ್ತಿ

ಹೋಗುವದು ಮರಳಿಮರಳಿ ಶ್ರವಣವು ಮಾಡಿದರೆಪ್ರಜ್ಞಮಾಂದ್ಯ ಹೋಗುವದು ಮನನದಿಂದ ಕುತರ್ಕ ಹೋಗುವದು ನಿಧಿಧ್ಯಾಸ್ಯದಿಂದ ವಿಪರ್ಯಯ ದುರಾಗ್ರಹ ಹೋಗುವದು ಭಾವಿಪ್ರತಿ ಬಂಧವೇನು ಯಂದರೆ ಕೈಲಾಸ ವೈಕುಂಠ ಸತ್ಯಲೋಕಂಗಳಲ್ಲಿ ಅಪೇಕ್ಷೆಯಾದರೂ ಸರಿ ಬಹು ಜನ್ಮಗಳಲ್ಲಿ ಇಹಲೋಕದ ಸಾರ್ವಭೌಮಾದಿಗಳ ಸನುಭವಿಸಬೇಕೆಂಬ ಅಪೇಕ್ಷೆಯೇ ಭಾವಿ ಪ್ರತಿಬಂಧವೆನಿಸುವದು ಇದಕ್ಕೆ ಪರಿಹಾರ ಹ್ಯಾಗಂದರೆ ನಿತ್ಯಾನಿತ್ಯ ಸವಸ್ತು ವಿವೇಕದಿಂದ ಇಹಲೋಕಾಂತವಾಪೇಕ್ಷೆಯು ಬಿಡುವದೆ ಪರಿಹಾರ ಈರೀತಿಯಲ್ಲಿ ಪ್ರತಿಬಂಧತ್ರಯಂಗಳು ತಿಳಿದು ಸಪ್ತಭೂಮಿಕೆ ಗಳಳಪಟ್ಟವನೆ ಮುಕ್ತನೆನಿಸುವನು ಅವನಿಗೆ ಸಂಚಿತ ಕರ್ಮಕ್ಷಯವಾಗಿ ಸಚ್ಚಿದಾನಂದ ಸ್ವರೂಪನಾಗುವನು.

ಸಕಲ ಸಾಧನ ನಿರೂಪಣಂ ನಾಮ ಚತುರ್ಥೋಧ್ಯಾಯೆ ಸಂಪೂರ್ಣಂ,

ಐದನೇಯ ಸಂಧಿ

ಸಪ್ತ ಭೂಮಿಕೆಯ ವಿವರ

ಗುರುಗಳು ಚಾರ್ಯ್ಯ ಶಿಷ್ಯನೇ ಯಂದುಸಪ್ತಭೂಮಿಕೆಗಳಂನಿರೂಪಿಸಿದರು ಭೂಮಿಕೆಗಳಂದರೆ ಸೋಪಾನವೆನಿಸುವದು ಅದು ಹ್ಯಾಗಂದರೆ ಮೊದಲನೇದು ಸುಖೇಚ್ಛೆ ಯರಡನೇದು ಸದಾತ್ಮ ವಿಚಾರ ಮೂರನೇದು ನಿಸ್ಸಂಗ ನಾಲ್ಕನೇದು ವಾಸನಾಕ್ಷಯ ಐದನೇದು ಆನಂದ್ಧಿ ಆರನೇದು ತುರ್ಯವೆನಿಸುವದು ಏಳನೇದು ತುರ್ಯಾತೀತವೆನಿಸುವದು ಇವಕ್ಕೆ ವೇನೆಂದರೆ ಹೇಳೇವು ಸುಖೇಚ್ಛೇಯಂದರೆ ತಾಪತ್ರಯಾತ್ಮಕವಾದ ಸಂಸಾರದಲ್ಲ ಆದಿಮಧ್ಯಾವಸಾನಗಳಲ್ಲಿಯೂ ಸುಖಲೇಶನೂ ಇಲ್ಲದೆ ದುಃಖಮಯವಾದ ಕಾರಣ ಈ ದುಃಖಹೋಗಿ ಸುಖ ಯೆಂದಿಗಾದೀತೋ ಯಂದು ಯೋಚನೆ ಸ್ಥಿರವಾಗಿ ಆವಾಗ ಹುಟ್ಟುತ್ತದೆಯೋ ಆಗ ಸುಖೇಚ್ಛೆಯನಿಸುವದು ಹಾಗಾದರೆ ಸುಖವಾವುದು ಯಂದು ಗುರುಗಳನ್ನು ಕೇಳುವಲ್ಲಿ ಬ್ರಹ್ಮಸಾಕ್ಷಾತ್ಕಾರ ಸುಖವೇ ಸುಖ ವಿುಕ್ತಾದ ಸಾರ್ವಭೌಮ ಪದವಿಯೇ ಸ್ವರ್ಗ ಸತ್ಯಲೋಕ ಮೊದಲಾದ ದೇವತಾಧಿಪತ್ಯವು ದುಃಖವೇ ಸರಿಯಂದು ಹೇಳಲಾಗಿ ಹಾಗಾದರೆ ಅಬ್ರಹ್ಮಾನಂದವು ನಮಗೆ ಹ್ಯಾಗೆಶಿಕ್ಕೀತು ಯಂದು ಶಿಷ್ಯಕೇಳಲಾಗಿ ಯರಡನೇ ಭೂಮಿಕೆಯಾದ ಆತ್ಮವಿಚಾರದಿಂದ ಸುಖವುಂಟಾದೀತು ಯಂದು ಗುರುಗಳುಹೇಳಿದರು ಆ ಆತ್ಮವಿಚಾರ ಹ್ಯಾಗೆಯಂದುಶಿಷ್ಯಕೇಳಗೊಂಡಲ್ಲಿ ಹೇಳುವರು ಆತ್ಮಾನಾತ್ಮವಿಭಾಗವಂ

ಮಾಡಬೇಕು ಅದು ಹ್ಯಾಗಂದರೆ ದೇಹೇಂದ್ರಿಯ ಮನಃ ಪ್ರಾಣಾದಿಗಳ
ಮಾಯಾಕಾರ್ಯವಾಗಿ ಅನೃತ ಜಡ ದುಃಖಾತ್ಮಕವಾಗಿ ಅನಿತ್ಯವಾಗಿ ಇ
ರುವವೆಲ್ಲ ಅನಾತ್ಮಗಳೆನಿಸುವವು ಆತ್ಮನೆಂದರೆ ಕಾಲತ್ರಯದಲ್ಲಿಯೂ ಬಾ
ಧ್ಯನಲ್ಲದೆ ನಿತ್ಯವಾಗಿ ಅಜ್ಞಾನ ಲೇಶವೂ ಇಲ್ಲದೇ ಶುದ್ಧಜ್ಞಾನ ಸ್ವರೂ
ಪನಾಗಿ ದುಃಖಲೇಶವೂ ಇಲ್ಲದೆ ಸುಖಸ್ವರೂಪನಾಗಿ ಮಾಯಾತೀತನಾಗಿ
ಪರಿಪೂರ್ಣನಾಗಿ ಇರುವಾತನೇ ಆತ್ಮನೆನಿಸುವನು ಆ ಅನಾತ್ಮಗಳಬೇರ್ಪ
ಡಿಸಿ ಇವಕ್ಕೆ ಅಧಿಷ್ಠಾನಭೂತನಾಗಿ ಆ ವಸ್ತುತ್ರಯ ಸಾಕ್ಷಿಯಾಗಿ ಸರ್ವ
ಜ್ಞಾನಾದಾತ್ಮನೇ ಆತ್ಮನೆನಿಸುವನು ಎಂಬದೆ ಎರಡನೇಯಭೂಮಿಕೆಯು
ನಿಸ್ಸಂಗವಂದರೇ ಏನು ನಿರೂಪಿಸೇವು ದೇಹೇಂದ್ರಿಯ ಮನಃ ಪ್ರಾಣಾ
ದಿಗಳಲ್ಲಿ ನನ್ನದೇಹ ನನ್ನ ಕಣ್ಣು ನನ್ನ ಕಿವಿ ನನ್ನ ಮೂಗು ನನ್ನನಾಲಿಗೆ
ನನ್ನ ತ್ವಕ್ಕು ಎಂಬ ಮಹಾಕಾರವನ್ನು ನನ್ನ ಮನೆ ನನ್ನ ಹೆಂಡತಿ ನ
ನ್ನ ಮಕ್ಕಳು ಮೊದಲಾದದ್ದು ಹ್ಯಾಗೆ ಭಿನ್ನವೋ ಆದೇ ತಾನು ಹ್ಯಾಗೆ
ಅಲ್ಲವೋ ಹಾಗೆ ಮಮಕಾರವಬಿಟ್ಟು ಜ್ಞಾನಸ್ವರೂಪನಾದ ಪ್ರತ್ಯಗಾತ್ಮ
ನೇ ತಾನೆಂಬ ಅನುಭವದಲ್ಲಿ ನಿಲ್ಲುವದೇ ಅಸಂಗವೆಂಬಮೂರನೇಯಭೂ
ಮಿಕೆಯೆನಿಸುವದು ಹಸಿವು ಬಾಯಾರಿಕೆಗಳೆರಡು ಪ್ರಾಣಧರ್ಮಗಳು ಶೋ
ಕ ಮೋಹಗಳೆರಡು ಮನೋಧರ್ಮಗಳು ಜರಾ ಮರಣಗಳೆರಡು ದೇಹ
ಧರ್ಮಗಳು ಈ ಷಡೂರ್ಮಿಗಳು ಅವರವರ ಧರ್ಮಗಳೆನ್ನಬೇಕು ಮನವೇ
ಸಂಶಯರೂಪ ಬುದ್ಧಿಯೇ ನಿಶ್ಚಯ ರೂಪು ಚಿತ್ತ ಅಲೋಚನಾತ್ಮಕವು
ಅಹಂಕಾರವೇ ಅಭಿಮಾನರೂಪು ತನ್ನ ಮನಬುದ್ಧಿ ಯುಂಟಾಗಲು ತ
ನ್ನಿಂದ ಭಿನ್ನವಂದರಿತು ಆ ಧರ್ಮಗಳನ್ನೆಲ್ಲಾ ತಾನು ತಿಳಿಯುತ್ತಿದ್ದನಾಗಿ
ಆ ತಿಳಿವಂತಹ ಸಾಕ್ಷಿಯನ್ನು ಬೇರೆ ಅಹಂಯೆಂದು ನಿಲ್ಲಬೇಕು ಇವೆಲ್ಲಾ
ನಿಸ್ಸಂಗವೆಂಬ ಮೂರನೇಯ ಭೂಮಿಕೆ ಎನಿಸುವದು ನಾಲ್ಕನೇದುವಾ
ಸಕ್ಷಯ ವೆನಿಸುವದು ಅದು ಹ್ಯಾಗಂದರ ನಿರೂಪಿಸೇವು ನಾನು ಬ್ರಾಹ್ಮ
ಣ ಕ್ಷತ್ರಿಯ ವೈಶ್ಯ ಶೂದ್ರನೆಂಬ ವರ್ಣಾಭಿಮಾನವು ನಾನು ಬ್ರಹ್ಮಚಾ
ರಿ ಗೃಹಸ್ಥ ವಾನಪ್ರಸ್ಥ ಯತಿ ಅವಧೂತ ಯೋಗೀಶ್ವರ ಬ್ರಹ್ಮಜ್ಞಾನಿ
ಯೆಂಬವು ಮೊದಲಾದ ಇನ್ನು ನಾನು ಪುರುಷನು ಸ್ತ್ರೀ ಅವಧಾನ ಸಾ
ಸ್ತ್ರಿಯು ದೀಕ್ಷಿತನು ಯಂತಲೂ ಕರ್ಮಾನುಷ್ಠಾನಂಗಳು-ಮಾಡುವಲ್ಲಿ ಇ
ದು ವಿಧಿನಿಷೇದವೆಂಬವು ಇದು ಮೊದಲಾದವೆಲ್ಲ ವಾಸನೆಯೆನಿಸುವದು ಹಾ
ಗೆನ್ನಬಾರದೆ ಅಂದರೆ ಹಾಗೆಂಬದೇ ಅವಿವೇಕ ಅಜ್ಞಾನವೆನಿಸುವದು ಸರ್ವ

ತ್ರ ಅನುಭವವಾಗಿರುವಲ್ಲಿ ಸರ್ವರೂ ಅಜ್ಞಾನಿಗಳೇ ಯಂದರೆ ಸರ್ವರೂ ಅ
ಜ್ಞಾನಿಗಳೇ ಸರಿ ಹಾಗಾದರೆ ಇದು ಶುದ್ಧವಾಗಿ ಅವಿವೇಕವೆಂದ ಮೇಲೆ ಒಂ
ದು ಮಾತ್ರ ಯುಕ್ತಿಯಲ್ಲಿ ತೋರಿಸಿಕೊಟ್ಟರೆ ತಿಳಿದುಕೊಂಡೇನು ಎಂದರೆ
ನಿರೂಪಿಸೇವು ಅದು ಹ್ಯಾಗೆಂದರೆ ನಾನು ಬ್ರಾಹ್ಮಣನೆಂದಾಗ ಈ ಬ್ರಾಹ್ಮ
ಣತ್ವವು ದೇಹಕ್ಕೋ ಜೀವನಿಗೋ ಆತ್ಮನಿಗೋ ಮಾಡುವ ಕರ್ಮಕ್ಕೋ ಯೆಂ
ದು ವಿಚಾರಿಸಿದರೆ ದೇಹ ಸಕಲವಾದ ಜಾತಿಯವರಿಗೂ ಇರುತ್ತಾಗಿ ಅ
ವರೆಲ್ಲರೂ ಬ್ರಾಹ್ಮಣರೆನ್ನಬೇಕು ಹಾಗನ್ನಲಿಲ್ಲವಾಗಿ ಬ್ರಾಹ್ಮಣತ್ವ
ದೇಹ ಧರ್ಮವಲ್ಲ ಜೀವನಿಗೆ ಆದೀತು ಯಂದರೆ ಯಲ್ಲರಲ್ಲಿಯೂ ಜೀವನಿ
ದ್ದನಾಗಿ ಆ ಜೀವರೆಲ್ಲ ಬ್ರಾಹ್ಮಣರೆನ್ನಬೇಕು ಹಾಗೆನ್ನಲಿಲ್ಲವಾಗಿ ಬ್ರಾಹ್ಮ
ಣತ್ವ ಜೀವನ ಧರ್ಮವಲ್ಲ ಆತ್ಮನಿಗೆ ಆಗಬಹುದೆ ಯಂದರೆ ಆತ್ಮ ನಿರ್ವಿಕಾ
ರಿಯಾಗಿ ಅಗೋಚರನಾದ ಕಾರಣ ಆತ್ಮನಿಗೆ ಸರ್ವಾತ್ಮನಾ ಹೇಳಲೇ
ಕೂಡದು ಕರ್ಮ ಬ್ರಾಹ್ಮಣನಾದಾನೆ ಯಂದರೆ ಕರ್ಮ ಕ್ರಿಯಾರೂಪವಾದ
ಕಾರಣ ಆ ಕ್ರಿಯೆ ಸರ್ವ ಸಾಧಾರಣವಾಗಿ ಯಿದ್ದೀತು ಆ ಕ್ರಿಯದೊಳಗೆಲ್ಲ
ಬ್ರಾಹ್ಮಣನಾಗಬೇಕು ಕ್ರಿಯೆಗಳು ಭಿನ್ನಾಭಿನ್ನವಾದ ಕಾರಣ ಕ್ರಿಯೆಗಳು
ಬ್ರಾಹ್ಮಣನ್ನ ಕೂಡದು ಹಾಗಾದರೆ ಈ ಬ್ರಾಹ್ಮಣತ್ವಕ್ಕೆ ಗತಿಯೇನೆಂ
ದರೆ ಹೇಳೇವು ಒಬ್ಬ ಮನುಷ್ಯನು ತನ್ನ ತಂದೆಯಂತಲೂ ಮಗನೆಂತಲೂ
ಮಗನು ತಂದೆಯಂತಲೂ ಮೊಮ್ಮಗ ಅಜ್ಜನೆಂತಲೂ ಹೆಂಡತಿ ಗಂಡನೆಂ
ತಲೂ ಮೈದುನನು ಭಾವನೆಂತಲೂ ಭಾವ ಮೈದುನನೆಂತಲೂ ಹೀಗೆ ವು
ದ್ಯೋಗಗಳು ಮಾಡುವಾಗ ಆಯಾ ಉಪಾಧಿಯಿಂದ ಭಿನ್ನನಾಮಗಳಾಗಲು
ಇವೆಲ್ಲವೂ ಉಪಾಧಿ ಸಮ್ಮಂಧದ ಮೇಲೆ ಕಲ್ಪಿತಗಳಾಗಿ ಹ್ಯಾಗೆ ಸತ್ಯವ
ಲ್ಲವೋ ಹಾಗೆ ಬ್ರಾಹ್ಮಣತ್ವಾದಿಗಳೆಲ್ಲಾ ವ್ಯವಹಾರ ಪಡುವದಕ್ಕೋಸ್ಕ
ರ ಕಲ್ಪಿತವಾಗಿ ಬಂತೆಂಬ ಕಾರಣ ಇದೊಂದೂ ಸತ್ಯವಲ್ಲವೆಂದು ಆ ವಾಸ
ನಗಳನ್ನೆಲ್ಲಾ ನಿಶ್ಶೇಷವಾಗಿ ಬಿಟ್ಟು ನಾಮ ರೂಪ ರಹಿತನಾದ ಸಾಕ್ಷಿ
ಮಾತ್ರವಾದ ಆತ್ಮನೇ ನಾನು ಸತ್ಯನೆಂದು ಈ ಅನುಭವ ದೃಢವಾಗಿ ನಿಂ
ತದ್ದೇ ಇದು ವಾಸನಾಕ್ಷಯವೆಂಬ ನಾಲ್ಕನೆಯ ಭೂಮಿಕೆ ಯೆನಿಸಿಕೊಂ
ಬುವದು ಐದನೆಯ ಭೂಮಿಕೆ ಆನಂದಿನಿ ಎನಿಸಿಕೊಂಬುವದು ಅದು
ಹ್ಯಾಗೆಂದರೆ ಹೇಳೇವು ಪೂರ್ವೋಕ್ತ ಪ್ರಕಾರವಾದ ಆತ್ಮನ ಸಂ
ಧಾನದಿಂದ ಆನಂದಾವಿರ್ಭೂತವಾಗುವದು ಆ ಸುಖದ ಆಸ್ವಾದಿ
ಸುವದೇ ಆನಂದಿನಿ ಎಂಬ ಭೂಮಿಕೆ ಎನಿಸುವದು ವಾಸನಾ

ಹೊಯವ ಮಾಡಿಕೊಂಡು ಆತ್ಮಧ್ಯಾನ ಮಾಡೇನೆಂದರೆ, ಆತ್ಮ ಸಾಕ್ಷಾತ್ಕಾರವೂ ಅಲ್ಲದೆ, ಯೆಂದಿಗೂ ವಾಸನಾಕ್ಷಯವಾಗದಾದ್ದರಿಂದ ಒಂದೇವೇಳೆ ವಿಷಯ ತ್ಯಾಗವು ಮಾಡಬಾರದು, ವಿಷಯಂಗಳು ದುಃಖಾತ್ಮಗಳೆಂದು ತಿಳಿದು, ಅಸಹ್ಯದಿಂದಲೇ ಸೇವಿಸುತ್ತಾ ಆತ್ಮಾನುಸಂಧಾನವೇ ಮುಖ್ಯವಾಗಿ ಮಾಡುತ್ತ ವೈರಾಗ್ಯಾಭ್ಯಾಸಗಳಿಂದ ಸಾಧಿಸುತ್ತಾ ಬರಲಾಗಿ ವಿಷಯಗಳು ತನ್ನ ತಾನೇ ಬಿಡುತ್ತ ಆತ್ಮಧ್ಯಾನ ಬಲವಾಗಿ ಅಳವಟ್ಟು ಬರುವದರಿಂದ ಆತ್ಮಾನಂದವು ಸ್ವಭಾವವಾಗಿ ನಿಲುಕಡೆಯಾಗುವದು. ಮೊದಲು ವಿಷಯವಾಸನೆ ಹ್ಯಾಗೆ ಸ್ವಾಭಾವಿಕವಾಗಿ ಇತ್ತೋ ಹಾಗೆಯೇ, ಆತ್ಮಾನುಭವವು ಸ್ವಾಭಾವಿಕವಾಗುವದು, ಹೀಗೆ ಆನಂದಾಸ್ವಾದನವು ಮಾಡುವದೇ ಆನಂದಿನಿಯೆಂಬ ಐದನೆಯ ಭೂಮಿಕೆ ಯೆನಿಸುವದು, ಆರನೆಯ ಭೂಮಿಕೆ ತುರ್ಯವೆನಿಸುವದು, ಅದು ಹ್ಯಾಗೆಂದರೆ, ಆತ್ಮನು ಸಚ್ಚಿದಾನಂದ ನಿತ್ಯ ಪರಿಪೂರ್ಣನದ ಕಾರಣ ಸತ್ ಚಿತ್ ಆನಂದಃ, ನಿತ್ಯ ಪರಿಪೂರ್ಣಃ ಯೆಂದು ಪಂಚಪದ ಪ್ರಯೋಗವುಂಟಾಗಿ ಇವು ಐದು ಏನು ಕಾರಣವಾದವೆಂದರೆ, ಸತ್ ಯೆಂದರೆ ಕಾಲತ್ರಯಾ ಬಾಧ್ಯವೆನಿಸುವದು. ಚಿತ್ ಯೆಂದರೆ ಸಾಲದೇ, ಕಡಿಮೆ ಪದಗಳ್ಯಾತಕ್ಕೆಂದರೆ ಪರ್ವತಗಳು ಕಾಲತ್ರಯದಲ್ಲೂ ಇರುತ್ತವಾಗಿ ಅವೇ ಬ್ರಹ್ಮವೆಂದು ತೋರೀತು ಎಂದು ಚಿತ್ಪದ ಪ್ರಯೋಗವು ಇವು ಎರಡೇ ಸಾಲದೇ ಅಂದರೆ, ಚಿದ್ರೂಪವು ಸೂರ್ಯಾದಿಗಳಲ್ಲಿಯೂ ಇದ್ದೀತಾಗಿ ಇವರೇ ಬ್ರಹ್ಮವೆಂದು ತೋರುತ್ತೆ ಎಂಬದಾಗಿ ಆನಂದ ಪ್ರಯೋಗವು ಇವು ಮೂರೇ ಸಾಲದೇ ಯೆಂದರೆ, ಸಚ್ಚಿದಾನಂದಗಳು ಬ್ರಹ್ಮ ಇಂದ್ರಾದಿಗಳಲ್ಲಿಯೂ, ಇದ್ದಿತಾಗಿ ಇವರೇ ಬ್ರಹ್ಮವೆಂದು ತೋರೀತು ಯೆಂಬದಾಗಿ ನಿತ್ಯಪದ ಪ್ರಯೋಗವು ಹ್ಯಾಗೆಂದರೆ, ಬ್ರಹ್ಮೋಪೇಂದ್ರಾದಿಗಳಂ ಬ್ರಹ್ಮವೆಂದು ತೋರಿದರೇನು ಯೆಂದರೆ, ಇವರು ಪ್ರಳಯ ಕಾಲದಲ್ಲಿ ತಿರೋಭಾನವಾಗುತ್ತಾರಾಗಿ, ಸೂರ್ಯ ಚಂದ್ರಾದಿಗಳು ಕಾಲ ಕರ್ಮಾಧೀನವಾಗಿರುವರಾಗಿಯೂ, ತತ್ಪರಿಹಾರಾರ್ಥ ನಿತ್ಯಪದ ಪ್ರಯೋಗವು ಇವೇ ಸಾಲದೇ ಯೆಂದರೆ ಸಾಕು, ಬ್ರಹ್ಮವೆಂದರೆ ಪ್ರಾದೇಶಮಾತ್ರವಾಗಿ ತೋರುವುದು, ಪ್ರಾದೇಶವೆಂದರೆ, ಹನ್ನೆರಡಂಗುಲ ಪ್ರಮಾಣವು ಅಷ್ಟುಮಾತ್ರವೇ ತೋರಿತುಯೆಂದರೆ, ತನ್ನಿರಾಸಾರ್ಥವಾಗಿ ಪೂರ್ಣಪದ ಪ್ರಯೋಗವು ಹೀಗೆ ಪಂಚಪದ ಸ್ವರೂಪನಾದಾತ್ಮನೆಂತಿಳಿದು ಈ ಆತ್ಮನೇ ತಾನೆಂದು ಸಾಕ್ಷಿಭಾವದಲ್ಲಿ ನಿರ್ವಿಕಲ್ಪ ಸತತಾವಮಾತ್ರವಾಗಿ ಭಾವ ನಿಲ್ಲುವ

ದೇ ತುರ್ಯಾವಸ್ಥೆ ಎನಿಸುವದು, ಸಾಕ್ಷಿತ್ವ ಹ್ಯಾಗಂದರೆ, ಜಾಗ್ರತ್ಸ್ವಪ್ನ ಸುಷುಪ್ತಿಗಳೆಂಬ ಅವಸ್ಥಾತ್ರಯವ ನರಿವವರಿಗೆ ಸಾಕ್ಷಿಯೆನಿಸುವದು, ಅದು ಹ್ಯಾಗಂದರೆ, ನಿನ್ನಿನ ಜಾಗ್ರದವಸ್ಥೆಯಲ್ಲಿ ದಿವಾರಾತ್ರಿಯಲ್ಲಿಯೂ ಏನೇನು ವ್ಯಾಪಾರಗಳಂ, ಮಾಡುತ್ತಾನೆಂದೆನೊ, ಆವ್ಯಾಪಾರಂಗಳಲ್ಲಿ ವ್ಯಾಪಕನಾಗಿ ವ್ಯವಹರಿಸಿಕೊಂಡು ಇದ್ದಹಾಗೆ ಸ್ವಪ್ನಾವಸ್ಥೆಯಲ್ಲಿಯೂ ವ್ಯವಹರಿಸಿಕೊಂಡು ಇದ್ದಹಾಗೆ ಸ್ವಪ್ನಾವಸ್ಥೆಯಲ್ಲಿಯೂ ವ್ಯವಹರಿಸಿಕೊಂಡಿದ್ದು ನಿದ್ರೆಯಂ ವ್ಯಾಪಿಸಿದಾಗ ಏನುನೂ ಅರಿಯದೆ ಯಿದ್ದು ಬೆಳಗಾಗಿ ಎದ್ದಮೇಲೆ ನನ್ನೆಹಗಲು ಇಂತಾವ್ಯಾಪಾರಗಳು ಮಾಡಿದೆ ಇಂಥಾಕನಸು ಕಂಡೆನೆಂತಲೂ, ಗಾಢನಿದ್ರೆಬಂದು ಸುಖದಲ್ಲಿ ಮಲಗಿದ್ದೆನು, ಏನುತಿಳಿಯಲಿಲ್ಲವೆಂದು ಮೂರವಸ್ಥೆಗಳ ಅನುಭವ ಹೇಳುತ್ತಾನಾಗಿ, ಈರೀತಿಯಲ್ಲಿ ಅನೇಕವಸ್ಥೆಗಳು ಬಂದು ಆಯಾಯವಸ್ಥೆಗಳಲ್ಲಿ ಕೂಡಿ, ಆಯಾಯವಸ್ಥೆಗಳು ಹೋದರೂ ಅವುಗಳ ಸಂಗಡ ಹೋಗದೆ ಮುಂದೆಬರುವ ಅನೇಕಾವಸ್ಥೆಗಳಿಗೆ ಆಧಾರವಾಗಿರುವದೆ ಸಾಕ್ಷಿತ್ವವು, ಇಷ್ಟುಮಾತ್ರವೇ ಅಲ್ಲದೆ, ಮೋಹೋಪಾದಿಯಿಂದ ಕರ್ಮವಂ ಮಾಡಿ ಆ ಕರ್ಮಾನುಸಾರವಾದ ಫಲಭೋಗ ಸುಖದುಃಖಗಳ, ಅನುಭವಿಸಿ ಅನೇಕ ದೇಹಗಳು ಹೋದಾಗ್ಯೂ, ಆ ದೇಹಗಳಲ್ಲಿ ಸಂಗಡ ಹೋಗದೆ ಮುಂದೆಬರುವದೇಹಗಳಿಗೆ ಆಧಾರವಾಗಿ ಅದರ ವಿಕಾರಗಳೊಂದನು ಹೊಂದದೆ, ನಿರ್ವಿಕಾರಿಯಾಗಿರುವದು, ಬಾಲ್ಯ, ಯೌವ್ವನ, ಕೌಮಾರಾದಿ, ಅವಸ್ಥೆಗಳಲ್ಲಿ ಬೆರೆಯದೆ, ನಿಜವಾಗಿ ಇರುವುದೆ ಸಾಕ್ಷಿತ್ವವು. ಈ ಸಾಕ್ಷಿತ್ವವೇ ತುರ್ಯಾವಸ್ಥೆಯೆಂಬ ಆರನೆಯ ಭೂಮಿಕೆಯು ತುರ್ಯಾತೀತವೇ ಏಳನೆಯ ಭೂಮಿಕೆಯೆನಿಸುವದು, ಅದು ಹ್ಯಾಗಂದರೆ, ನಿತ್ಯಶುದ್ಧ ಬದ್ಧ ಸತ್ಯ ಪರಮಾನಂದಾನಂತಾದ್ವಯ ಪರಿಪೂರ್ಣ ಬ್ರಹ್ಮವೆಂಬು ವಂದೇ ವಸ್ತುವಾದ ಕಾರಣ, ಈ ಪರಬ್ರಹ್ಮವು ವಿನೋದವಾಗಿ ಕ್ರೀಡಿಸುವದಕ್ಕೆ ಒಂದು ಪ್ರಪಂಚವ ಮಾಡಬೇಕೆಂದು ಯೋಚಿಸುವಲ್ಲಿ, ಒಂದು ಶಕ್ತಿ ಹುಟ್ಟಿತು ಆ ಯೋಚನೆಯೇ ಇಚ್ಛಾಶಕ್ತಿಯೆನಿಸಿತು, ಅವೇ ಪರಿಣಾಮಿಸಿ ಪ್ರಕೃತಿ, ಮಹಾತತ್ವ, ಅಹಂಕಾರ, ಪಂಚಮಹಾಭೂತಂಗಳ್, ಇವೇ ಇಪ್ಪತ್ತೈದುತತ್ವಗಳಾಗಿ ಅವೆ ಸ್ಥೂಲ ಸೂಕ್ಷ್ಮ ಕಾರಣಗಳೆಂದು ತನುತ್ರಯವೆನಿಸಿ, ಅವರಲ್ಲಿ ಸ್ಥೂಲತನುವಿನಲ್ಲಿ ಜಾಗ್ರದವಸ್ಥೆಯು ಸೂಕ್ಷ್ಮತನುವಿನಲ್ಲಿ, ಸ್ವಪ್ನಾವಸ್ಥೆಯು, ಕಾರಣಶರೀರದಲ್ಲಿ ಸುಷುಪ್ತ್ಯಾವಸ್ಥೆಯು, ಈ ಅವಸ್ಥಾತ್ರಯಗಳಂ ಅನುಭವಿಸುವ ಜೀವನೊಬ್ಬನೇ. ಅ

ವಸ್ಥಾಭೇದದಿಂದ ವಿಶ್ವತೈಜಸಪ್ರಾಜ್ಞನೆಂಬ ನಾಮಮಾತ್ರದವನಾಗಿ, ಕಡೆಗೆ ಜಾಗ್ರಸ್ವಪ್ನಗಳೆರಡನು ದಾಟಿ, ಸುಷುಪ್ತಿಯಲ್ಲಿ ಪ್ರಾಜ್ಞನೆಂಬ ನಾಮ ನಿಜವಾಗಿ, ಆತನೇ ಪ್ರತ್ಯಗಾತ್ಮನು ಸಾಕ್ಷಿಯು, ಆ ಉಪಾಧಿಯ ಪಾದಾಗ ಪ್ರಾಜ್ಞನೆ, ಪರಿಪೂರ್ಣನಾದ ಪರಮಾತ್ಮನೆನಿಸಿಕೊಂಬನು ಈ ಪರಮಾತ್ಮನನ್ನೇ ಯೋಗಿಗಳು ಧ್ಯಾನಿಸುವಾಗ ಬುದ್ಧಿಯು ಶುದ್ಧಸತ್ವ ಪ್ರಧಾನವಾಗಿ, ರಜಸ್ತಮೋಗುಣಗಳ ಗಂಧ ಲೇಶವುಇಲ್ಲದೆ ಹೋಗಿ, ಆಗ ಆತ್ಮನು, ತುರ್ಯನೆನಿಸಿಕೊಂಡಿದ್ದು ಸಚ್ಚಿತ್ಪ್ರಧಾನವಾದ ವೃತ್ತಿಯು ಲಯವಾಗಿ ನಿರುಪಾಧಿಯಾಗುವದು, ನಾನು ತುರ್ಯಾತೀತನೆಂಬ ಕೋರಿಕೆಯೇ ತೋರದೆ, ಶುದ್ಧ ಪರಿಪೂರ್ಣನಾದ ಆತ್ಮನನ್ನ ತುರ್ಯಾತೀತನೆಂದು ಶೃತಿಗಳು ಹೇಳುವವು, ಇದೀಗ ತುರ್ಯಾತೀತವೆಂಬ ಏಳನೆಯ ಭೂಮಿಕೆಯೆನಿಸುವದು, ಈ ರೀತಿಯಲ್ಲಿ ಪರಬ್ರಹ್ಮ ಸ್ವರೂಪನಾಗುವದಕ್ಕೆ ಪ್ರಥಮ ಭೂಮಿಕೆಯಾರಭ್ಯ ಶಾಸ್ತ್ರೋಕ್ತಪ್ರಕಾರ ನಿರಂತರಾಭ್ಯಾಸ ಶೀಲನಾಗಿದ್ದವನೇ, ತುರ್ಯಾತೀತವೆನಿಸಿಕೊಂಬನು, ಇದು ಏಳುನ್ನೂ ಜ್ಞಾನಕ್ಕೆ ಪಾವಟಿಕೆಗಳೆನಿಸಿಕೊಂಬವು, ಈ ಪಾವಟಿಕೆಗಳ ಹತ್ತಬೇಕಾದರೆ,ಬಹುಶ್ರವಣ ಮನನ ನಿಧಿಧ್ಯಾಸನ ಶೀಲನಾದರೆ ಅಲ್ಲಲ್ಲಿ ಶಾಸ್ತ್ರಗಳಲ್ಲಿದ್ದ ಸಾರವನ್ನೆಲ್ಲಾ ತಿಳಿದು ಭಜನೋಪಾಯ ಶಿಕ್ಕುವದು, ಆದ್ದರಿಂದ ಅವಧೂತ ಸನ್ಯಾಸ ಮಾರ್ಗಗಳೆಬಿಟ್ಟು ಹೊಂದಬೇಕೆಂಬ ಭ್ರಾಂತಿಯು ಬಿಟ್ಟು, ಮೊದಲು ನಿಷ್ಕಾಮ್ಯಕರ್ಮಗಳಂಮಾಡಿ, ಚಿತ್ತಶುದ್ಧಿ ಸಂಪಾದಿಸುತ್ತ ಅನ್ಯಥಾ ಶರಣನ್ನಾಸ್ತಿತ್ವಮೇವ ಶರಣಂಮಮ. ಯೆಂದು, ಶರಣಾಗತಬುದ್ಧಿಯಿಂದಿರಜೇಕು, ವಿರಕ್ತನಿಗೆ ನಿಷ್ಕಾಮಕರ್ಮಗಳು ಯಾಕೆ ಹೇಳಬೇಕೆಂದರೆ, ಕರ್ಮದಲ್ಲಿ ಶ್ರದ್ಧೆ ಇಲ್ಲದವನಿಗೆ ವಿರಕ್ತಿಯು ಹುಟ್ಟಲಾರದು, ಅದು ಹ್ಯಾಗಂದರೆ,ಕರ್ಮಮಾಡುವನು ನಿಷ್ಕಾಮ್ಯವಾಗಿ ಮಾಡುವಲ್ಲಿ, ಈ ಫಲವೇ ನನಗೆ ಬೇಡವೆಂದು ಮಾಡುವನು ಶರೀರ ಪ್ರಯಾಸವು,ದ್ರವ್ಯವ್ಯಯವು,ಮಾಡುವಾಗ ಧಾರಾಳವಾದ ಬುದ್ಧಿಯು,ಅಶಾವರ್ಜವು. ಆದವನಲ್ಲದೆ ಮಿಕ್ಕಾದವರಿಗೆ ಫಲಿಸುವುದೆ,ತ್ಯಾಗಬುದ್ಧಿ ಇಲ್ಲದೆ ಜ್ಞಾನಬಾರದೆಂಬಲ್ಲಿಗೆ,ಸಪ್ತಭೂಮಿಕೆಗಳೆಂಬ ಪಂಚಮೋಧ್ಯಾಯಸಮಾಪ್ತವು

ಆರನೆಯ ಅಧ್ಯಾಯವು.

ರಾಜಯೋಗ ವಿಚಾರ.

ರಾಜಯೋಗವೆಂದರೆ ಎಲ್ಲಾ ಯೋಗಗಳು ಇದರ ಆಶ್ರಯ ಮಾಡುವದರಿಂದ ಈ ಯೋಗಕ್ಕೆ ರಾಜನೆಂದು ಹೆಸರಾಯಿತು, ಈ ರಾಜಯೋಗದಿಂದ ಪರಮಾತ್ಮನ ದರ್ಶನಮಾಡುವದಕ್ಕೆ ಹಿತಕರವಾದ ಶಾಂಭವೀಮುದ್ರೆ ಈ ಮುದ್ರೆಯು ಪಾರ್ವತಿಗೆ ಪ್ರಿಯವಾದದ್ದು, ಆದ್ದರಿಂದಲೇ ಶಾಂಭವೀಮುದ್ರೆಯನ್ನಿಸಿಕೊಂಡಿತು, ಈ ಶಾಂಭವೀ ಮುದ್ರೆಯಿಂದ, ಧ್ಯಾನವಮಾಡಿ, ಹುಟ್ಟಿದ ಚಿದಗ್ನಿಯಿಂದ, ಪುರುಷನು ಅನೇಕ ಜನ್ಮಗಳಿಂದಲೂ ಮಾಡಿದ ಪಾಪಗಳು ಬ್ರಹ್ಮಹತ್ಯ,ಗೋಹತ್ಯ, ಸುರಾಪಾನಾದಿಗಳು, ಮೊದಲಾದ ಮಹಾ ಪಾತಕವೆಂಬ ಸಮುದಾಯಗಳಾದ ಅರಣ್ಯಗಳು ದಹಿಸುವದಾದ್ದರಿಂದ, ಈ ಶಾಂಭವಿಮುದ್ರೆ ಸಕಲಮುದ್ರೆಗಳೊಳಗೆ ಪ್ರಸಿದ್ಧವಾದದ್ದು, ಶ್ಲೋ॥ ಬ್ರಹ್ಮಹತ್ಯಾಸಹಸ್ರಾಣಿ ವೀರಹತ್ಯಾಶತಾನಿಚ॥ ಏಕೇನ ಧ್ಯಾನಯೋಗೇನದಹತ್ಯಗ್ನಿರಿವೇಂಧನಂ॥ ಎಂಬಹಾಗೆ ಶಾಂಭವಿಮುದ್ರೆಯಿಂದ ಲಕ್ಷ್ಯವಿಟ್ಟು ದೃಷ್ಟಿ ಮೂರುವಿಧವಾಗಿ ನೋಡಬೇಕು ಅದು ಹ್ಯಾಗಂದರೆ, ಪೂರ್ಣಿಮಾ, ಅಮಾವಾಸ್ಯೆ, ಪಾಡ್ಯಮಿ ಎಂಬದಾಗಿ ಮೂರುವಿಧ-ಕಣ್ಣಾರೆಪ್ಪೆ ಎರಡನ್ನೂ ಮುಚ್ಚಿ ನಾಸಿಕಾಗ್ರದಮೇಲೆ ದೃಷ್ಟಿಯು ಮನಸ್ಸು ನಿಲ್ಲಿಸಿ, ನೋಡುವದೇ ಅಮಾವಾಸ್ಯೆ ದೃಷ್ಟಿಯೆನಿಸಿ ಷಣ್ಮುಖಿ ಸಾಧನೆಯಾದುದ್ದು ಇದು ಅರ್ಧಮದೃಷ್ಟಿ-ಮೂರುಪಾಲು ಮುಚ್ಚಿ ನಾಸಿಕಾಗ್ರದಮೇಲೆ ವಂದುಪಾಲು ಇಟ್ಟರೆಪ್ಪೆಪಾಟು ಇಲ್ಲದೆ ನೋಡುವದು ಪಾಡ್ಯಮಿ ದೃಷ್ಟಿಯೆನ್ನಿಸಿಕೊಳ್ಳುವದು ಇದು ತಾರಕ ಯೋಗಕ್ಕೆ ಸಾಧಕವಾದದ್ದು. ಇದು ಮಧ್ಯಮ-ವಳ್ಳೇ ಶುಚಿಯಾದ ಸ್ಥಳದಲ್ಲಿ ಕೃಷ್ಣಾಂಜಿನ ದರ್ಭಾಸನಯಾವದಾದರೂ ಒಂದು ಆಸನ ಸಳವಡಿಸಿ, ಆಚಾರಕಟ್ಟಿನಿಂದ ಶ್ರೀಗುರುವುಗಳಂಸ್ಮರಿಸಿ, ಮುಖವು ಕೊಂಚ ತಗ್ಗಿಸಿ, ಕಣ್ಣುಗುಡ್ಡು ಮೇಲಿನರೆಪ್ಪೆ ಕೆಳಕ್ಕೆ ಸೇರಿಸಿ, ಸ್ಥಿರವಾದ ಮನಸ್ಸುಳ್ಳವನಾಗಿ ದಿನದಿನವು ಅಭ್ಯಾಸಮಾಡಲು, ದೃಷ್ಟಿ ಎರಡು ಝಾವ ನಿಂತದ್ದೇಆದರೆ ಗಾಢಾಂಧಕಾರವಾದ ಕತ್ತಲು ಆಗಿ, ಆ ಕತ್ತಲು ಮತ್ತೂ ನೋಡಲು, ಮೊದಲು ಹೇಳಿದ ತಾರಕ ಚಿನ್ಹೆಗಳು ಕಾಣುವದು। ಅದೇ ದೃಷ್ಟಿ ನಿಲಕಡೆಯಾಗಿ ನೋಡಿದರೆ, ತಾರಕ ಚಿನ್ಹೆಗಳೆಲ್ಲ ಸ್ಪಷ್ಟವಾಗಿ, ಬೆಳದಿಂಗಳಸ

ಪ್ರಕಾಶವು ಕಾಣುವದು. ಅದೇ ಬೆಳಕು ನೋಡುವಲ್ಲಿ ಪ್ರಕಾಶದ ನ
ಡುವೆ ಸಕಲ ಭುವನ ಕರ್ತನಾದ ಪರಬ್ರಹ್ಮನು ಕೋಟಿಸೂರ್ಯ ಪ್ರಕಾಶ
ನಾಗಿ ಆ ಭಿನ್ನವಲಯಾಕೃತಿಯಾಗಿ ತಾಲುಮೂಲ ದ್ವಾದಶಾಂತದನಡು
ವೆ ಕಾಣಬರುವದು ಇದೇ ಭ್ರೂಮಧ್ಯವೆಂದು ಅದೇ ಪರಬ್ರಹ್ಮಸ್ವರೂಪ
ವೆಂದು ಹೇಳುವರು ತಾಲುಮೂಲ ದ್ವಾದಶಾಂತವೆಂಬುವದು ದವಡೆಗಳಂ
ಇದರ ಮೂಲವೆಂದರೆ ಕಂಠದ ಕೆಳಗೆ ಇರುವ ಯಿಲುವು ದ್ವಾದಶಾಂತವೆಂ
ದರೆ ಕಣ್ಣಿನ ಬೊಂಬೆಯಮೇಲೆ ಹನ್ನೆರಡು ಅಂಗುಲದಲ್ಲಿ ಇರುವದು ಈ
ಮಧ್ಯ ಪರಮಾತ್ಮನು ಕಾಣಬರುವ ಇದೇ ಹುಣ್ಣಿಮೆದೃಷ್ಟಿ ಅದೇ ಶಾಂ
ಭವಿ ಮುದ್ರೆ ಇದೇ ಖೇಚರಿ ಅರ್ಥಾವಲೋಚನೆ ಇದೇ ರಾಜಯೋಗ ಖೇಚ
ಚರಿ ಅಂದರೆ ಆಕಾಶದಲ್ಲಿ ಸಂಚರಿಸುವದು ಪರಮಾತ್ಮಸ್ವರೂಪವಾದ ದ
ಹರಾಕಾಶವು ನಾಶಿಕಾಗ್ರದಲ್ಲಿ ಇರುವದು ಅಲ್ಲಿ ಲಕ್ಷ್ಯವು ನೋಡಲು ಖೇ
ರಿಯೆಂಬ ಹೆಸರಾಯಿತು ಇದಕ್ಕೆ ಪ್ರಮಾಣಶ್ಲೋಕ॥ ಬಹಿರ್ವ್ಯಾಪ್ತಿಃಸ್ಥಿ
ತಂನಿತ್ಯಂ ನಾಸಾಗ್ರೇಚವ್ಯವಸ್ಥಿತಂ ॥ ನಿಷ್ಕಳಂ ಕಂವಿಜಾನಿಯಾತ್ ಷ
ಡೂರ್ಮಿರಹಿತಂಶಿವಂ॥ ಈ ರಾಜಯೋಗವೆ ಬ್ರಹ್ಮರುದ್ರಾದಿಗಳಿಗೆ ಜೀವನ
ಈ ಯೋಗೀಶ್ವರನು ಯೆಲ್ಲಿ ಇದ್ದರೂ ದೊಡ್ಡವನೆಂದು ತಿಳಿಯಬೇಕು ಈ
ಅರ್ಥಾವಲೋಕನಕ್ಕಿಂತಲೂ ಹೆಚ್ಚಾದಯೋಗವಿಲ್ಲ ಇದು ತಿಳಿಯದೆ ಬ
ಹುವೇದಶಾಸ್ತ್ರಪುರಾಣಗಳಂ ಓದಿದರೂ ಫಲವಿಲ್ಲ ಗಾರ್ಧಭವು ಅಪಾರ
ಭಾರವಾದಶ್ರೀಗಂಧಕಸ್ತೂರಿಮೊದಲಾದವಸ್ತುವುಹೊರುವದೇಹೊರುವ
ಅದರೆಪರಿಮಳವುತಿಳಿಯಲಾರದು ಶ್ಲೋ॥ಚತುರ್ವೇದಧರೋವಿಪ್ರಃಸೂಕ್ಷ್ಮ
ಬ್ರಹ್ಮನವಿಂದತಿ। ವೇದಭಾರಭರಾಕ್ರಾಂತಸ್ಸರ್ವೆ ಬ್ರಾಹ್ಮಣಗಾರ್ಧಭಃ॥

ಇದಲ್ಲದೆ ಸಾಂಖ್ಯತಾರಕಾ ಮನಸ್ಕವೆಂದು ಮೂರು ವಿಧ- ಇದರೊಳ
ಗೆ ತಾರಗಯೋಗ ಪೂರ್ವಯೋಗ ಅಮನಸ್ಕ ಅಪರಯೋಗ ಇವಕ್ಕೆ
ಪೂರ್ವಾಪರ ಹೆಸರುಗಳು ವುಂಟಾಗಿರುವವು ಈ ತಾರಕ ಅಮನಸ್ಕಗಳಿ
ಗೆ ಕೊಂಚ ಭೇದವಿರುವದು ಈ ಯೋಗವು ಸಾಧಿಸುವ ಕ್ರಮ ಹ್ಯಾಗಂ
ದರೆ ಈ ಶರೀರದಲ್ಲಿ ಮೊದಲು ಹೇಳಿದ ಪಂಚವಿಂಶತಿ ತತ್ವಗಳು ಬೇರ್ಪ
ಡಿಸಿ ಆ ತತ್ವಗಳಿಗೆಲ್ಲ ಪ್ರಧಾನ ತತ್ವವಾದ ಪರಬ್ರಹ್ಮನು ಸೂರ್ಯ ಚಂ
ದ್ರಾಗ್ನಿ ಮಂಡಲಾಂತರ್ವರ್ತಿಯಾಗಿ ನೇತ್ರರೂಪನಾಗಿ ಇದ್ದಾನೆಂದು ತಿಳಿ
ದು ಪರಬ್ರಹ್ಮಸ್ವರೂಪನಾದ ನಾರಾಯಣನಲ್ಲಿ ಭಕ್ತಿವುಂಟಾಗಿ ಆಕಾಶ
ರೂಪವಾದ ಪರಮಾತ್ಮನನ್ನ (ಪಶ್ಯತಿ) ನೋಡ- ತಲಿದ್ದಾನೆ (ಯತ್ರ)ಯು

ತ್ರಮುನೇ(ಯಂತಿ) ಎಲ್ಲೆಲ್ಲಿ ಮನಸ್ಸು ಹೊಂದುವದೋ ಅಲ್ಲಲ್ಲೇ ಪರಮಾಪ ದವ ಹೊಂದುವನು ಈ ಪ್ರಕಾರ ಹಾಲು ಮೊಸರಿನಲ್ಲಿ ಬೆಣ್ಣೆ ಇದ್ದರೂ ಮಥನೆ ಇಲ್ಲದೆ ಬೆಣ್ಣೆ ಬರುವದಿಲ್ಲವಾಗಿ ಅದರಂತೆ ಧ್ಯಾನವೆಂಬ ಮಥನೆ ಯಿಂದ ಪರಮಾತ್ಮನು ಪ್ರಕಾಶನಾಗುವ ಈ ಧ್ಯಾನಕ್ಕಿಂತಲೂ ಹೆಚ್ಚಾವ ಸಾಧಕವೇನೋ ಇಲ್ಲವೆಂದು ಶಿಷ್ಯನು ಕುರಿತು ಅಂಗನ್ಯಾಸ ಕರನ್ಯಾಸ ಮುಂತಾದ ಅನುಷ್ಠಾನ ಮೂಲಮಂತ್ರ ಸಹ ಉಪದೇಶವ ಮಾಡಿ ಸಮಾ ಧಿ ನಿಷ್ಟನಾಗುವ ಹಾಗೆ ನಿಗ್ರಹ ಸಾಮರ್ಥ್ಯವನ್ನುಂಟುಮಾಡಿದ ಗುರು ವುಗಳಿಗೆ ಶಿಷ್ಯನು ವಂದನೆಯನ್ನು ಮಾಡಿ ಓ ಸ್ವಾಮಿ ತಮ್ಮ ಅನುಗ್ರಹವು ನನ್ನ ಮೇಲೆವುಂಟಾಗಿ ಸಂಸಾರವೆಂಬ ಸಾಗರವು ದಾಟಿದೆನು ನನ್ನ ಒಬ್ಬ ನಿಗೋಸ್ಕರ ಕೇಳುವನಲ್ಲ ಲೋಕದ ಜನರು ಮೂಢಭಾವದಲ್ಲಿಯೇ ಸಂಸಾ ರದಲ್ಲಿ ಆಸಕ್ತಿವುಳ್ಳವರಾಗಿ ಕಡೆಗೂ ಒಳ್ಳೇ ಕಾರ್ಯಗಳು ಮಾಡಲೊಲ್ಲದೆ ಕಾಲನ ಬಾಧಗೆ ಗುರಿಯಾಗುವರಲ್ಲಾ ಅಂಥಾವರಿಗೆ ತಮ್ಮ ಮರಣ ಕಾ ಲವು ತಿಳಿದರೆ ಆಗಲಾದರೂ ಒಳ್ಳೇ ಕಾರ್ಯ ಮಾಡುವನೇನೋ ತುತ್ತು ತ ನ್ನ ಆಸ್ತಿಯನ್ನು ಮತ್ತೂ ಸಂಸಾರಗುಟ್ಟವನ್ನು ತನ್ನ ದಾರಾಪುತ್ರಾದಿ ಗಳಿಗೆ ಹೇಳುವನೆ ಇದಕ್ಕೆ ಸಾಧಕಳೇನಾದರೂ ಇದ್ದರೆ ಹೇಳಬೇಕೆಂದು ಕೇಳಿದ ಶಿಷ್ಯನಂ ಕುರಿತು ಕಾಲಜ್ಞಾನವಂ ಪೇಳಿದರು.

ಅದು-ಏನಂದರೆ ಗಗನಮಾರ್ಗದಲ್ಲಿ ಸ್ವಾತೀಪಥವೆಂದುನ್ನು ತುರುಹಾ ದಿಯೆಂದುನ್ನೂ ಹೇಳುವರು ಅದು ಕಣ್ಣಿಗೆ ಕಾಣದಿರಲು ಆರುತಿಂಗಳಿಗೆ ಕಾಲನ ಭಯವು ದಿನಚರಿಯಲ್ಲೂ ಚಂದ್ರದರ್ಶನವಂ ಮಾಡುವಲ್ಲಿ ಮ ಧ್ಯದಲ್ಲಿರುವ ಕಳಂಕು ಕಾಣದಿರಲು ಆರುತಿಂಗಳಿಗೆ ಮರಣಭಯ ವಸಿ ಷ್ಠರ ನಕ್ಷತ್ರದ ಬಳಿಯಲ್ಲಿರುವ ಅರುಂದತಿಯು ಕಾಣದಿರಲು ಆರುತಿಂಗಳಿ ಗೆ ಪರಲೋಕಗತನಾಗುವನು ತನ್ನ ಕರವು ನೆತ್ತಿಯ ಮೇಲಿಟ್ಟಾಗಿರಿಕೆಯು ನೋಡಲು ದೊಡ್ಡದಾಗಿ ಕಾಣಿಸಿದರೆ ಒಂದು ತಿಂಗಳಿಗೆ ಮೃತನಾಗುವ ನು ಎರಡು ಹಸ್ತವನ್ನುಗಿದು ಹಣೆಯಲ್ಲಿರಿಸಿ ಕೂಡಿದ ಸಂದು ನೋಡ ಲು ಸಂದು ಕಾಣದಿರೆ ಆರುತಿಂಗಳಿಗೆ ದಕ್ಷಿಣದಿಕ್ಕಿಗೆ ಪ್ರಯಾಣವು ತನ್ನ ಕೊರಕುತ್ತಿಗೆಗೆ ಕೈಗಳೆರಡು ತಳುಕಿಕ್ಕಿ ಕೀಳಲು ಪುಚ್ಚಿಬರೆ ಒಂದೇ ತಿಂ ಗಳಿಗೆ ಇಹಲೋಕಪ್ರಾಪ್ತಿಯು ತಪ್ಪುವದು ದೀಪದ ಯೆಂಟು ಅಂಗುಲದ ಈಚೆ ತರ್ಜನಿಯು ಬೆರಳು ಮರೆಯಾಗಿ ಹಿಡಿದರೆ ದೀಪ ಮರೆಯಾಗುತ್ತಿದ್ದರೆ

ವಂದುತಿಂಗಳಿಗೆ ಮರಣಭಯ ಕಡೆಕಣ್ಣನೇ ವತ್ತಿನೋಡಲು ನಾಲಗಿರಿ
ಯ ಪ್ರಭೆಕಿಡಿಗಳು ಕಾಣದಿರಲು ಒಂದುತಿಂಗಳಿಗೆ ಮೃತ್ಯುಭಯವುನಿತ್ಯ
ವು ನೀರಿನೊಳಗೆ ಸೂರ್ಯನ ಪ್ರತಿಬಿಂಬ ದರ್ಶನ ಮಾಡುವವಗೆ ಪೂರ್ವದಿ
ಕ್ಕಿನಲ್ಲಿ ಮುಕ್ಕಾಗಿ ಕಾಣಲು ಆತಗೆ ಆರುತಿಂಗಳು ದಕ್ಷಿಣ ಮುಕ್ಕಾದ
ರೆ ಮೂರುತಿಂಗಳು ಪಶ್ಚಿಮ ಮುಕ್ಕಿರಲು ಯೆರಡುಮಾಸ ಕುಬೇರ ದಿ
ಕ್ಕಿನಲ್ಲಿರಲು ವಂದೇಮಾಸ ಮಧ್ಯದಲ್ಲಿ ಛಿದ್ರವಾಗೆ ದಶದಿನವು ಬಿಂಬಕ್ಕೆ
ಧೂಮಮುಚ್ಚಲು ಅಂದೇಮರಣಭಯ ಜಲಮಲವು ಬಿಡುವಲ್ಲಿ ಶೀನು
ಕೂಡಿ ಬರಲು ಏಳುದಿನಕ್ಕೆಮರಣ ತನ್ನೆರಳಿಗೆತಲೆಯು ಕಾಣದಿರಲುವಿಂ
ಶತ್ರಿ ದಿನಕ್ಕೆಮರಣ ವೆಂದರಿ. ತನ್ನಕಿವಿಯೊಳಗೆ ದುಂದುಭಿ ಶಂಖದಧ್ವ
ನಿಗಳ ಬೊಬ್ಬೆ ಬೋರಗುಟ್ಟೆ ದಶದಿನಕ್ಕೆ ಮರಣಸೂಚನೆ ನೀರಿನಲ್ಲಿ ತ
ನ್ನನೆರಳುನೋಡಲು ರೂಪ ಪಲ್ಲಟನಾದರೆ ಹತ್ತುದಿನ ಸಮಯವಿರುವ
ದು ತೋಳು ನರ ಕಿರಿತೊಡೆಯ ನರ ಒಡಿದೆಳೆಯಲು ನೋವುಕಾಣದಿ
ರೆ ಹತ್ತುದಿನಕ್ಕೆ ಕಾಲನಭಯ ಒಳ್ಳೆಯ ಬುದ್ಧಿವುಳ್ಳವನಿಗೆ ಮರವು
ಮುಚ್ಚಿದರೂ ಬುದ್ಧಿ ತತ್ತರವಿತ್ತರಾಗಲೂ ಕಾಲುಕಯ್ಯು ನಿಶ್ಶಕ್ತಿಯೂ
ಗಿ ಜಂಗಾಬಲ ತಪ್ಪಿದರೂ ಆಯುಷ್ಯವೂ ಇಲ್ಲದಿರುವದು ತನ್ನಸ್ವಪ್ನದ
ಲ್ಲಿ ತನಗೆ ತಲೆಯೇ ಇಲ್ಲದಿರುವಣ ಒಂಟೆಹತ್ತುವಣ ದಾಸವಾಳದ ಹು
ವ್ವುಗಳನ್ನು ಧರಿಸುವಣ ತನ್ನಮೈಗೆ ಸಗಣಿ ಬೊಳಿಯುವಣ ಯಮದಿಕ್ಕಿ
ಗೆ ಪ್ರಯಾಣಗಮನ ಮಾಡುವಣ ಪಿತೃಗಳಕೂಡೆ ತಾನು ಕೂಡುವಣ
ಶರೀರಆಲಸ್ಯದಲ್ಲಿರುವಾಗ ಯಾರೋ ತನ್ನಬಾಯಿಂದು ಕರಿಯುವದು
ಬ್ರಾಹ್ಮಣರುಕೂಡಿ ತನಗೆ ಶ್ರಾದ್ಧವಮಾಡುವದು ತನ್ನ ಪತ್ನಿಯ ಕ
ರಿಮಣಿಯಹರಿದುಹಾಕುವಣ ಶೀರೆಯುಬಿಚ್ಚ್ಯನಿರ್ವಾಣದಲ್ಲಿ ಬಾಯೆಂದು
ಕರಿಯುವ ಈ ಸೂಚನೆಗಳ ಸ್ವಪ್ನವು ಮರಣದ ಭಯವೆಂದರಿ.

ಈ ಪ್ರಕಾರ ಗುರುಗಳು ಶಿಷ್ಯನಿಗೆಬೋಧಿಸಿ ಮೂಲಮಂತ್ರನ್ಯಾಸಗ
ಳನ್ನೆಲ್ಲವಂ ಅನುಗ್ರಹಿಸಿ ಶಿಷ್ಯನ ಉದ್ಧಾರಮಾಡಿದ ರೆಂಬಲ್ಲಿಗೆ ರಾಜ
ಯೋಗ ಕಾಲಜ್ಞಾನ ಪ್ರಕರಣವೆಂಬ ಪಂಚೀಕರಣ ಗ್ರಂಥದಲ್ಲಿ ಷ
ಷ್ಟಮೋಧ್ಯಾಯವು ಸಂಪೂರ್ಣಮಾದುದು.

ಪಂಚೀಕರಣ ಸಂಪೂರ್ಣವು.